ಕೊರವಂಜಿ



ಮಾರ್ಚ್ ೧೬, ೧೯೪೨

ಸಂಪಾದಕರು : ಶ್ರೀ. ರಾ. ಶಿ.

ಸಲಹೆಗಾರರು : ಶ್ರೀ. ನಾ. ಕಸ್ತೂರಿ

ವಿಷಯಾನುಕ್ರಮಣಿಕೆ

ಸಂಪಾದಕೀಯ
ಮನೀ ಡ್ರಾ-ಪದ್ಯ
ಬಾಳೆಯ ಬಾಳು
ಗಂಡಸರಿಗೊಂದು ಸಲಹೆ
ರಾಜೀವಪುರದ ರಾಜಕೀಯ
ಇಂದಿನ ಸರ್ವಜ್ಞ-ಪದ್ಯ
ಮರಮಾತು
ಕುಹಕಿಡಿಗಳು
ಹಸ್ತಗುಣ
ಸಂಗ್ರಾಮ ಗಾದೆಗಳು
ಸಿನಿಮಾ ಮನೆ-ಪದ್ಯ
ಕೊಲಾ ಕೋಲಿದಾ
ಕವಿಯ ಕಿವಿ
ವಾಸುವಿನ ವ್ಯಕ್ತಿತ್ವ
ಸಣ್ಣ ಕತೆಗಳಿಗೆ ಸುಲಭ ಸೂಚನೆಗಳು
ಕಾಲೇಜು ಮುಕ್ತಕಗಳು-ಪದ್ಯ

ಬಿಡಿ ಪತ್ರಿಕೆಯ ಬೆಲೆ: ಎರಡಾಣೆ

ನಗೆಯ ——— ಮಾಸ ಪತ್ರಿಕೆ

ಕೊರವಂಜಿ

ಸಂಪುಟ ೧] ಮಾರ್ಚ್ ೧೯೪೨ [ಸಂಚಿಕೆ ೧

ಸಂಪಾದಕೀಯ

ಕರ್ಣಾಟಕಾಂಬೆಯು ಹಲವು ರೂಪಗಳಲ್ಲಿ ನವಚೈತನ್ಯವನ್ನು ಹೊಂದಿ ಶೋಭಿಸುತ್ತಿರುವಳು. ಆದರೆ ವಿಡಂಬನ ದೃಷ್ಟಿಯಿಂದ ಸಾಕಷ್ಟು ಸಾಲಂಕಾರಳಾಗಿಲ್ಲವೆಂಬ ಕೊರತೆಯು ಕಾಣಬರುತ್ತದೆ. ಹಲವಾರು ಪತ್ರಿಕೆಗಳು ಹಾಸ್ಯಕ್ಕಾಗಿಯೇ ಮೀಸಲಾಗಿ ಸೇವೆಮಾಡುತ್ತಿವೆಯಾದರೂ, ಆಂಗ್ಲೇಯ ಪಂಚ್ ತೆರನಾದ ತಿಳಿಹಾಸ್ಯವು ಬೆಳೆದುಬಂದಿಲ್ಲ. ಈ ನ್ಯೂನತೆಯನ್ನು ತನ್ನ ಶಕ್ತ್ಯಾನುಸಾರವಾಗಿ ಕಡಿಮೆಮಾಡುವುದೇ ಕೊರವಂಜಿಯ ಧ್ಯೇಯ.

ಯುಗಾದಿ, ನವವರ್ಷದಾರಂಭ—ಕೊರವಂಜಿಯು ಹುಟ್ಟಿದ ದಿನ-ಇಂದು ಕನ್ನಡಿಗರ ಸೇವೆಗಾಗಿ ಕಂಕಣತೊಟ್ಟಿದೆ. ಸಮಾಜದ ಕುಂದು ಕೊರತೆಗಳು ಕೊರವಂಜಿಗೆ ವಸ್ತುವೇ ವಿನಹಾ ಸಮಾಜದ ವ್ಯಕ್ತಿಗಳಲ್ಲ. ರೂಢಿಯ ಅವಿವೇಕಗಳನ್ನು ಹಾಸ್ಯಮಾಡುವುದೇ ವಿನಹ ರೂಢಿಗಾರರನ್ನಲ್ಲ. ಸುಪ್ರಸಿದ್ಧ ಕವಿತೆಗಳ ಅಣಕವಾಡುಗಳು, ಕವಿಗಳಿಗೆ ಕೊರವಂಜಿಯ ನಮ್ರಕಾಣಿಕೆಯೇ ವಿನಹಾ ಚೇಷ್ಟೆ ಅಲ್ಲ.

ಕೊರವಂಜಿಯು ಕನ್ನಡಿಗರ ಮಗು. ಅದಕ್ಕೆ ಸಾಕಷ್ಟು ಚೈತನ್ಯವಿದ್ದರೆ, ಕನ್ನಡಿಗರ ಆದರ ಪ್ರೇಮಗಳು ಸಾಕಷ್ಟು ದೊರೆತರೆ, ಅದು ಬೆಳೆದು ವೃದ್ಧಿಯಾಗುವುದು. ಪ್ರಚಾರಕರ ಆಶಯವಾದರೂ ಇಷ್ಟೆ.

ಸಕಲವೂ ತಗ್ಗಿದ ಸಂಗ್ರಾಮ ಕಾಲದಲ್ಲಿ ಮಾಸ ಪತ್ರಿಕೆಯು ಹೊರಡಿಸುವುದು ಕಷ್ಟದ ಕೆಲಸ. ಅಷ್ಟೇ ಹುಚ್ಚರ ಕೆಲಸ. ಜನರೆಲ್ಲರೂ ಕಳವಳಪಡುವಾಗ, ಕಷ್ಟಗಳನ್ನನುಭವಿಸುತ್ತಿರುವಾಗ, ಹಾಸ್ಯದ ಅವಶ್ಯಕತೆಯು ಹೆಚ್ಚು. ಹಾಗಾಗಿ ಈಗ ಕೊರವಂಜಿಯು ಹೊರಟಿದೆ.

ಕೊರವಂಜಿಯ ಅಭಿವೃದ್ಧಿಗಾಗಿ, ಸಹೃದಯರಾದ [illegible] [illegible], ಸಲಹೆಗಳನ್ನು ಕೊಡುವುದಾದರೆ, ಅವರುಗಳಿಗೆ [illegible] ಸುಸ್ವಾಗತವು.

ಸಂಪಾದಕ.

ಕುಹಕಿಡಿಗಳು

ಕನ್ನಡ ದೇಶದಲ್ಲಿ ಮಾಡಲ್ಪಟ್ಟ ವಿಮಾನದ ಹೆಸರು "ಘಾರ್ಸ್ಟ್" ಆದರ ಸಂದೇಹವು ನಿವೃತ್ತಿಯಾಗಿದೆಯೆಂದೂ, ಅದು ಈಗ ಹಾರುತ್ತಿದೆಯೆಂದೂ ಖಚಿತವಾಗಿ ತಿಳಿದುಬಂದಿದೆ.

* *

ಸರ್ಕಸ್ಸಿನಲ್ಲಿ ಒಬ್ಬ ಯುವತಿಯು ತುಟಿಗಳ ಮೇಲಿಟ್ಟ ಕಲ್ಲು ಸಕ್ಕರೆಯನ್ನು ಸಿಂಹವೊಂದು ತಿನ್ನುವುದಂತೆ.

ಇದೇನು ಕಷ್ಟ, ನಾವೂ ಮಾಡಬಲ್ಲೆವು—ಸಿಂಹಕ್ಕಿಂತ ಚೆನ್ನಾಗಿ.

* *

ಬೆಂಗಳೂರಿನಲ್ಲಿ ಎ. ಆರ್. ಪಿ. ವ್ಯವಸ್ಥೆಯನ್ನು ಬಹಳ ಬಿರುಸಾಗಿ ಮಾಡುತ್ತಿದ್ದಾರೆ.

ಅವರೆ ಬಸ್ಸಿನ ದರಗಳನ್ನೂ ಹೆಚ್ಚುಮಾಡಲು ಇದೊಂದು ನೆವ ಎನ್ನುವುದು ಶುದ್ಧ ಸುಳ್ಳು.

* *

ಎಂಟು ಮದುವೆಗಳನ್ನು ಮಾಡಿಕೊಂಡ ಧೀರನೊಬ್ಬನು ತನ್ನ ಆತ್ಮ ಕಥೆಯನ್ನು ಬರೆಯುವನಂತೆ.

ಎಲ್ಲಾ ಪುಸ್ತಕಗಳಂತೆಯೇ ಇದೂಕೂಡ "ಪ್ರಕರಣ ಒಂದು" ಎಂದು ಆರಂಭಿಸುತ್ತದೆ.

* *

ನಮ್ಮ ಮಹಿಳೆಯರು ಮಂತ್ರಿಗಳಾಗಬೇಕೆಂಬ ಸೂಚನೆಯು ಬಂದಿದೆ.

ಮನೆಯಲ್ಲಿ ರಾಣಿಯರಾದವರು, ಹೊರಗೆ ಮಂತ್ರಿಗಳಾದಾರೇ?

* *

ರಾಜಕಾರಣ ಪಟುಗಳು ದಂತವೈದ್ಯರಲ್ಲಿಗೆ ಬಹುವಾಗಿ ಹೋಗುತ್ತಿದ್ದಾರಂತೆ

ಏನಾಶ್ಚರ್ಯ. ಅಲ್ಲಾದರೂ ಇವರುಗಳು ಸ್ವಾರ್ಥವಾಗಿ ಬಾಯಿ ತೆರೆಯಬಹುದಲ್ಲ?

* *


ಎ. ಆರ್. ಪಿ. ಗುಣಿಗಳಿಂದ ಬ್ರಾಹ್ಮಣ ಜಾತಿಯವರಿಗೆ ಏನು ಪ್ರಯೋಜನ ಎನ್ನುವುದು ಶುದ್ಧ ವಕ್ರತನ.

*

ಬರ್ಮಾ ಯುದ್ಧವನ್ನು ನೋಡಿದ ಮೇಲೆ ಅರ್ಥವಾಯಿತು ನಮ್ಮ ಹಳೆಯ ಗಾದೆ.

"ಹೊಕಿ ಹಾಟಿನ ಮೇಲೆ ಹಂಬಿಗನ ಬಂದ"

ಅಪರಂಜಿ



ಮೊನ್ನೆ ಟೀಪಾರ್ಟಿಯಲ್ಲಿ ಒಬ್ಬರು ಆಕಳಿಸಿದಾಗ ಅವರ ಬಾಯಿ ಹಾಗೆಯೇ ನಿಂತುಬಿಟ್ಟಿತಂತೆ. ಆ ದಿನದ ಉಪನ್ಯಾಸಕರು ನಮ್ಮೂರಿಗೆ ಬಂದಾಗ ನಾವು ಎಚ್ಚರಿಕೆಯಿಂದಿರಬೇಕು.

*   *

ವೇಣುಗಾನವೂ ವೀಣಾವಾದನವೂ ಮಾನವ ಚರಿತ್ರೆಯಲ್ಲಿ ಮೊದಲು ಯಾವಾಗ ಪ್ರಾರಂಭವಾಯಿತು, ಎಂದು ಒಬ್ಬರು ಸಂಶೋಧನೆ ನಡೆಸುತ್ತಿರುವರಂತೆ. ಕೂಸು ಸತ್ತಮೇಲೆ ಜಾತಕ ಕಟ್ಟಿಕೊಂಡು ನೋಡಬೇಕಾದ್ದೇನು ?

*   *

ನಮ್ಮ ಸಂಸ್ಥಾನದಲ್ಲಿ ಒಟ್ಟು ೨ ಲಕ್ಷ ಹಾರ್ಮೋನಿಯಂಗಳು ಇವೆಯೆಂದು ವರದಿಯಾಗಿದೆ. ಆದರೂ, ಖೂನಿಗಳ ಸಂಖ್ಯೆ ಮಾತ್ರ ಇಷ್ಟು ಕಡಿಮೆಯಾಗಿರುವುದು ಆಶ್ಚರ್ಯವೇ ಸರಿ!

*   *

ಲಾರಿ ಡ್ರೈವರುಗಳಿಗೆ ಪ್ರತ್ಯೇಕವಾಗಿ ಒಂದು ಪರೀಕ್ಷೆ ನಡೆಸುತ್ತಾರಂತೆ. ಈಗರ್ಥವಾಯಿತು, ಅವರು ಏತಕ್ಕೆ ಪಾದಚಾರಿಗಳ ಮೇಲೆಯೇ ವಾಹನಗಳನ್ನು ತಿರುಗಿಸುತ್ತಾರೆ ಎಂಬುದು ; ವ್ಯಾಸಂಗಕ್ಕಾಗಿ.

*   *

ಹಾಸ್ಟಲುಗಳಲ್ಲಿ ಸಂಗೀತಕ್ಕೆ ಪ್ರೋತ್ಸಾಹ ಕೊಡುತ್ತಿಲ್ಲವೆಂದು ಒಬ್ಬರು ದೂರಿದರಂತೆ. ಏಕೆ? ಪ್ರತಿಯೊಂದು ಹಾಸ್ಟಲಿನಲ್ಲೂ ಅನೇಕ ಸ್ನಾನದ ಮನೆಗಳಿವೆಯಲ್ಲಾ !

*   *

ಜೆಯಿಲಿಂದ ತಪ್ಪಿಸಿಕೊಂಡು ಊರೂರು ತಿರುಗುತ್ತಿದ್ದ ಒಬ್ಬ ಕೈದಿಯನ್ನು ಮೊನ್ನೆ ಹಿಡಿದು ತಂದು ಮತ್ತೆ ಜೆಯಿಲೊಳಗೆ ಕೂಡಿಸಿದರಂತೆ. ಹೊರಗಿರುವವರ ಕಷ್ಟಪರಂಪರೆಗಳನ್ನು ನೆನೆದರೆ, ಊರೂರು ತಿರುಗುವಂತೆ ಮಾಡುವುದೇ ಅವನಿಗೆ ತಕ್ಕ ಶಿಕ್ಷೆಯಾಗಿತ್ತು ಎನಿಸುತ್ತದೆ.

*

“ವಿವರಿಸುವುದಕ್ಕೊಂದು ವಿಷಯ, ಹೇಳುವುದರಲ್ಲೊಂದು ರೀತಿ, ಇವೆರಡೂ ಇಲ್ಲದಿದ್ದರೆ ಯಾರೂ ಗ್ರಂಥ ಬರೆಯಲು ಹೊರಡಬಾರದು” ಎಂದು

ಒಬ್ಬರು ಸಾಹಿತ್ಯಾಭಿಲಾಷಿಗಳು ಹೇಳಿದರಂತೆ. ಈ ಉಪದೇಶವನ್ನನುಸರಿಸಿದರೆ ನಮ್ಮ ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡದೊಂದು ಕ್ರಾಂತಿ ಉಂಟಾಗಬಹುದಾದರೂ ಯಾರಾದರೂ ಕೆಚ್ಚೆದೆಯ ಕಟ್ಟಾಳುಗಳು ಈ ಉಪದೇಶದಂತೆ ಬರೆಯಲು ಪ್ರಯತ್ನಿಸಬಹುದು.

* *

ತಿರುವಾಂಕೂರು ಸಂಸ್ಥಾನದಲ್ಲಿ ಈಚೆಗೆ ಮಹಿಳೆಯರೊಬ್ಬರನ್ನು ಮ್ಯಾಜಿಸ್ಟ್ರೇಟರಾಗಿ ಸರ್ಕಾರದವರು ನಿಯಮಿಸಿರುವರಂತೆ. ನಮ್ಮಲ್ಲಿ ಪೂರ್ವದಿಂದಲೂ ಪ್ರತಿಯೊಂದು ಸಂಸಾರದಲ್ಲೂ ಒಬ್ಬರು ಮಹಿಳಾ ಮ್ಯಾಜಿಸ್ಟ್ರೇಟರಿರುವರಲ್ಲಾ !



ಮಹಾತ್ಮಾ ಗಾಂಧಿಯವರ ಮೇಲ್ಪಂಕ್ತಿಯನ್ನೇ ಚಾಚೂ ತಪ್ಪದೆ ಅನುಸರಿಸುತ್ತಿದೇವೆ ಎಂದು ಹೇಳಿಕೊಳ್ಳುವ ಹಲವರು ಅವರಂತೆ ವಾರಕ್ಕೊಂದು ದಿನವಾದರೂ ಮೌನವಾಗಿರಬಾರದೆ ಅನ್ನಿಸುತ್ತದೆ.

ಮನಿ ಆರ್ಡರಾ....

ಇನ್ನೂ ಯಾಕೆ ಬರಲಿಲ್ಲಪ್ಪ ಮನಿ ಆರ್ಡರಾ
ಏಳೂ ಎಂಟೂ ತಾರೀಖೊಳಗೆ ತಂದುಕೊಡರಾ........

ಗೆಳೆಯರ ಗುಂಪಿಗೆ ಇಂದ್ರಭವನ ತಿಂಡಿ ತಿನಿಸಿದ್ದೆ !
ಹಿಡೀ ಹಿಡೀಲೀ ರೊಕ್ಕ ತೆಗೆದು ಹಿಡೀ ಅನಿಸಿದ್ದೆ !....
ಕಾಲೇಜಲ್ಲಿ ಕೊಡುಗೈ ನನ್ನದು ; 'ಕರ್ಣ' ಅನಿಸಿದ್ದೆ !....
ಹಾಲಿವುಡ್‌ನ ಲೇಟೆಸ್ಟ್ ಫಾಶನ್ ನನ್ನದು ಅನಿಸಿದ್ದೆ....

ಇನ್ನೂ ಯಾಕೆ ಬರಲಿಲ್ಲಪ್ಪ ಮನಿ ಆರ್ಡರಾ ?
ಏಳೂ ಎಂಟು ತಾರೀಖೊಳಗೆ ತಂದು ಕೊಡರಾ.

ಸ್ಕಾಲರ್‌ಶಿಪ್ಪು ಬಂದ್ರೂ ಇಲ್ಲಾಂತ್ಹರುಡೆ ಹೊಡೀತಿದ್ದೆ ;
ಅಪ್ಪ ಕಳಿಸೋ ರೂಪಾಯ್ನೆಲ್ಲಾ ಸಿನಿಮಾಗಿಡ್ತಿದ್ದೆ.....
ಅಪ್ಪನಿಗ್ಯಾರೋ ಬಿಚ್ಚಿರಬೇಕು ಪಿತೂರಿ ತಂತ್ರಾನಾ !
ಬಿರಕ್ನನ್ನಿಟ್ಟು ಮೂಗಿನ ಮ್ಯಾಲನ ಸಿಮ್ಕನೆ ಕುಂತಾನ !

ಇನ್ನೂ ಯಾಕ ಬರಲಿಲ್ಲಪ್ಪ ಮನಿ ಆರ್ಡರಾ ?
ಏಳೂ ಎಂಟು ತಾರೀಖೊಳಗೆ ತಂದು ಕೊಡರಾ.

ಭಾರೀ ಹಣದ ಸಾಲ ನಾನು ಹೊತ್ತುಕೊಂಡೇನ ;
ಮಾರೀ ಮುಚ್ಚಿ ಕತ್ತಲಲ್ಲೇ ಸುತ್ತಿಕೊಂಡೇನ.
ಇನಾಂ ಜೊತೇಲೀ ಸಲಾಮೂನು ಕೊಡ್ತೇನೆಂದೇನ ;
ಶೀನಾ ! ನಾಣಿ ! ವೆಂಕ ! ಗುಂಡ ! ಎಲ್ಟ್ಯಾರ್ಸ್ ಪ್ರೋಸ್ಪ್ಯಾಸ್ಯಾನ ?

ಇನ್ನೂ ಯಾಕ ಬರಲಿಲ್ಲಪ್ಪ ಮನಿಆರ್ಡರಾ ?
ಏಳೂ ಎಂಟು ತಾರೀಖೊಳಗೆ ತಂದು ಕೊಡರಾ.

ಫ್ರೆಂಡ್ಸ್ನು ಗಿಂಡ್ಸ್ನು ಸಾಲಗೀಲ ಎಷ್ಟುಜನ ಕೊಟ್ಟಾರು ?
ಮುಡ್ಗೋ ಅಂದಾಗ್ತಲಗೋ ಅಂದ್ರೆ ಎಷ್ಟುಜನ ಬಿಟ್ಟಾರು !
ಮಾತುಮಾತಿಗೆ ಮೂತಿ ತಿವಿದು ಮುಂದ್ಮುಂದು ಬರುತ್ತಾರೆ-
ಬಿಡೋ ಅಂದ್ರೆ ಕೊಡೋ ಅಂತ ಹಿಂದ್ಹಿಂದ್ಬರ್ತಾರೆ !

ಇನ್ನೂ ಯಾಕ ಬರಲಿಲ್ಲಪ್ಪ ಮನಿ ಆರ್ಡರಾ ?
ಏಳೂ ಎಂಟು ತಾರೀಖೊಳಗೆ ತಂದು ಕೊಡರಾ-

ಕಣ್ಣಿನಾಗಿನ ಗೊಂಬಿಹಾಂಗೆ ಕಾಯುತಂದೆಗೆನಾ !
ಬುರುಡೆಯೊಳಗೆ ಭಂಗಾರಾಂತ ಹೊಗಳುವರೆನ್ನ !
ಲೇಸಾಗಿಲ್ಲ ಸೀ ! ಕೂಸಾಗಿದ್ದರೂ ರೂಪ್ಸೆತ್ತೆಂಬರು !
ಬ್ಯಾಡ್ಮಿಂಟನ್ನಿಗೆ ಟೆನ್ನಿಸ್ ಬ್ಯಾಟ್ ನಿನಗೆ ಬೇಕೇನೆಂಬರು !

ಇನ್ನೂ ಯಾಕೆ ಬರಲಿಲ್ಲಪ್ಪ ಮನಿ ಆರ್ಡರಾ ?
ಏಳೂ ಎಂಟು ತಾರೀಖೊಳಗೆ ತಂದು ಕೊಡರಾ.

'ಹಸ್ತಗುಣ'

ನನ್ನ ಕೈಗೆ ಒಂದು ಗಂಡಾಂತರ ಬಂತು. ಎಡಗೈಗೆ. ಎಂದೂ ಯಾವ ಕೈಗೂ ನನಗೆ ಹೀಗಾಗಿರಲಿಲ್ಲ. ವಿಶೇಷವೇನೆಂದರೆ, ನನ್ನ ಪಕ್ಕದಲ್ಲೇ ಗಂಭೀರವಾಗಿ ಮಾತನಾಡದೆ ಜೋಲಾಡುತ್ತಿತ್ತು. ಆದರೆ ಕೊಂಚ ತೋಳಿನ ಮಟ್ಟಕ್ಕೆ ಎತ್ತೋಣವೆಂದರೆ ಬಾಯಿಬಡಿದುಕೊಳ್ಳುವಷ್ಟು ನೋವು!

ಬೇಗ ಬೇಗನೆ ಅದನ್ನ ಡಾಕ್ಟರ ಹತ್ತಿರಕ್ಕೆ ತೆಗೆದುಕೊಂಡುಹೋಗಿ ವರದಿ ಒಪ್ಪಿಸಿದೆ. ಅವರು 'ನಾಲಿಗೆ ನೀಡು', 'ಕಿವಿ ಬಗ್ಗಿಸು' 'ಶೀನು' ಎಂದು ಮುಂತಾಗಿ ಹೇಳಿ ಆ ನನ್ನ ಬಾಹುವನ್ನು ಹಿಡಿದು ಅಂತರಿಕ್ಷದ ಕಡೆಗೆ ಫಟಕ್ಕನೆ ಎತ್ತಿದರು. ಆಗ ನಾನು ಕೂಗಿಕೊಂಡಿದ್ದನ್ನು ಕೇಳಿ ಆಸ್ಪತ್ರೆಯಲ್ಲಿ ಮಲಗಿದ್ದ ರೋಗಿಗಳೆಲ್ಲರೂ ಎದ್ದು ಓಡಿಬಂದರು. ಅವರನ್ನು ಹಿಂದಕ್ಕೆ ಕಳುಹಿಸಿದನಂತರ ಆ ಡಾಕ್ಟರು ಒಂದು ಚೀಟಿ ಹರಿದು ನನ್ನ ಕೈಲಿ ಕೊಟ್ಟು 'ಹೋಗಿ ಬಾ' ಅಂದರು. ಅದನ್ನು ತೋರಿಸಿ ಒಂದು ಸೀಸೆ ಕೆಂಪು ಔಷಧಿ ತೆಗೆದುಕೊಂಡು ಮನೆ ಕಡೆ ಹೊರಟೆ.

ಪುಟ್ಟಶೀನು ಸಿಕ್ಕಿದ. "ಏನೋ? ದೊಣ್ಣೆ! ಚೆನ್ನಾಗಿದೀಯಾ?" ಅಂದ. 'ತಕ್ಕಮಟ್ಟಿಗೆ' ಎಂಬ ಪೀಠಿಕೆಯನ್ನು ಹಾಕಿ ನನ್ನ ಭುಜಪರಾಕ್ರಮವನ್ನು ಅವನಿಗೆ ವಿವರಿಸಿದೆ, "ಮೊದಲೇ ಹೇಳಬಾರದಾಗಿತ್ತೆ, ಮಂಕೆ? ನನಗೂ ಹೋದ ವರ್ಷ ಹೀಗೆಯೇ ಆಗಿತ್ತು. ಹಾಳಾದವನು ಅವನ ಹತ್ತಿರಕ್ಕೆ ಯಾಕೆ ಹೋದೆ ಅಂದ." ಇನ್ನೇನೂ ಇಲ್ಲ, ಪುಟ್ಟಶೀನು! ನೋಡಿಲ್ಲಿ....ಇಷ್ಟು ಎತ್ತರಕ್ಕೆ ಎತ್ತಿದರೆ....ಅಯ್ಯೋ "ಅಂದೆ." ಅದೇ! ಅದೇ ನನಗೂ ಆಗಿದ್ದದ್ದು! ನನಗೂ ಅಲ್ಲೇ ಪ್ರಾಣ ಹೋಗುತ್ತಿತ್ತು. ಇದಕ್ಕೆ ಇಂಗ್ಲೀಷಿನಲ್ಲಿ ಎಲ್‌ಬೋಸಿಸ್ ಅಂತಾರೆ. ಕೆಟ್ಟ ಖಾಯಿಲೆ, ಕೈಕೊಟ್ಟುಬಿಡುತ್ತದೆ. ಅದನ್ನು ಬೇಗ ಚಿಕಿತ್ಸೆ ಮಾಡಬೇಕು. ಹುಡುಗಾಟ ಮಾಡಬೇಡ, ಕಣೋ! ಹೊಟ್ಟೆಗೆ ಔಷಧ ಹುಯ್ದರೆ ಅದು ತೋಳಿನ ತನಕ ಹರಿದು ಬರುತ್ತದೇನೋ ಮಂಕ! ಬಿಸಾಕೋ, ಸೀಸೇನ! ಡಾಕ್ಟರ್ ಚಟ್ಟೋಪಾಧ ಅಂತ ಇದಾರೆ, ದೊಡ್ಡಪೇಟೆ ಕೊನೆಯಲ್ಲಿ, ನೆಟ್ಟಗೆ ಅವರನ್ನ ಹೋಗಿ ನೋಡು. ನಾಲ್ಕನೆಯ ದಿವಸ ವಾಸಿ ಆಗದಿದ್ದರೆ ನನ್ನ ಕಪಾಳಕ್ಕೆ ಹೊಡಿ." ಅಂದ.

ಮುಂದಕ್ಕೆ ನೂರು ಹೆಜ್ಜೆ ಹಾಕಿದೆ. ಪುಟ್ಟರಾಮು ಸಿಕ್ಕಿದ. ಅವನಿಗೂ ನನ್ನ ಎಡಗೈ ಯೋಗಕ್ಷೇಮ ಹೇಳಬೇಕಾಗಿ ಬಂತು. ನನ್ನ ಮಾತು ಮುಗಿದಾಗ ಅವನು ಮೆಲ್ಲಗೆ ತನ್ನ ಎಡಗೈಯನ್ನು ಮೇಲಕ್ಕೆ ಎತ್ತುತ್ತಾ, "ಎಲ್ಲಿಯತನಕ ಎತ್ತಿದರೆ ನೋವಾಗುತ್ತೆ? ಹೇಳು" ಅಂದ. "ಈ ಮಟ್ಟಕ್ಕೋ? ಈ ಮಟ್ಟದಲ್ಲಿತಾನೇ?" ಅಂದ. ನಾನು ತಲೆ ಆಡಿಸಿದೆ. "ನೋಡು, ಹೋದವರ್ಷ ನನಗೂ ಹೀಗೆಯೇ

ಆಗತ್ತೆ. ಇಂಥದ್ದಕ್ಕೆಲ್ಲಾ ಆಯುರ್ವೇದವೇ ಸರಿಕಣಯ್ಯಾ. ನಾಮಹಾಕ ಎಷ್ಟು ತ್ತಾರೆ ಇದಕ್ಕೆ. ತಡಮಾಡಿದರೆ ತಾಪತ್ರಯ. ಆಚೆ ಬೀದಿಯಲ್ಲಿ ಸುಬ್ಬಾಪಂಡಿತ ರಿದ್ದಾರೆ, ನೆಟ್ಟಗೆ ಅವರ ಹತ್ತಿರ ಹೋಗು. ಧನ್ವಂತರಿಯ ಅವತಾರವತಾರ ಪುಣ್ಯಾತ್ಮ. ಅವರೇ ನನ್ನನ್ನು ಕೈಹಿಡಿಸಿಕೊಂಡು ತಿರುಗಾಡುವ ಹಾಗೆ ಮಾಡಿದ ವರು. ತಂಪುಹೊತ್ತಿನಲ್ಲಿ ನೆನೆಯಬೇಕು, ಅವರನ್ನ" ಅಂದ.

ಮುಂದಿನ ಚೌಕದಲ್ಲೇ ಪುಟ್ಟುಸ್ವಾಮಿ ಸಿಕ್ಕಿದ. ಅವನ ತಮ್ಮನಿಗೆ ಇದೇ ಖಾಯಿಲೆ. ಮೊದಲುಮೊದಲು ಎಡಗೈಯಲ್ಲಿ ತೋರಿಕೊಂಡು ಬರಬರುತ್ತಾ ಮೈಯೆಲ್ಲಾ ಹರಡಿಬಿಟ್ಟಿತಂತೆ. ಇನ್ನೇನು ಮೆರವಣಿಗೆ-ಹೊರಡುವುದರಲ್ಲಿದ್ದನಂತೆ ಹುಡುಗ. ಇಪ್ಪತ್ತು ವರ್ಷ! ಮದುವೆಯಾಗಿ ಆರು ತಿಂಗಳು! ಅವನನ್ನು ಬದು ಕಿಸಿದ ವೈದ್ಯನ ಹೆಸರನ್ನೂ ವಿಳಾಸವನ್ನೂ, ಬರೆದುಕೊಟ್ಟು, ತನ್ನ ಕೆಲಸಕ್ಕೆ ಹೊರಟುಹೋದ, ಪುಟ್ಟುಸ್ವಾಮಿ.

ಮಾರ್ಕೆಟ್ ಹತ್ತಿರ ಸಿಕ್ಕಿದ ಪುಟ್ಟವೀರಪ್ಪನಿಗೆ ಪ್ರತಿ ವರ್ಷವೂ ನವರಾತ್ರಿ ಯಿಂದ ದೀಪಾವಳಿ ತನಕ ಹೀಗಾಗುವುದಂತೆ, ಬಲಗೈಗೆ. ಹುಬ್ಬಳ್ಳಿ ಸಮೀಪ ದಲ್ಲಿ ಇರುವ ಒಬ್ಬರ ಹೆಸರನ್ನು ಬರೆದುಕೊಟ್ಟು. "ನನ್ನ ಬಲಗೈಗಾದ ಮುಲಾ ಮನ್ನೇ ಅವರು ನಿನ್ನ ಎಡಗೈಗೂ ಕೊಡಬಹುದು. ಅಥವಾ ಹೃದಯದ ಹತ್ತಿರ ವಿರುವ ಕೈಯಾದ್ದರಿಂದ ಬೇರೆ ಮುಲಾಮು ಬೇಕಾಗಬಹುದು. ಹೇಗಿದ್ದರೂ ನೀನು ಈಗಲೇ ಹುಬ್ಬಳಿಗೆ ರೈಲು ಹತ್ತಿದರೆ ಕ್ಷೇಮ. ನಮ್ಮಲ್ಲಿಗೂ ಒಬ್ಬ ಸ್ನೇಹಿತ ಉಳಿದಹಾಗಾಗುತ್ತೆ" ಎಂದು ಎಚ್ಚರಿಸಿದ.

ಪುಟ್ಟು ಚಿಕ್ಕಪ್ಪನಿಗೂ ಇದೇ ಗೋಳಾಗಿತ್ತಂತೆ; ಅವನು ಹೇಳಿದ. ಪಾಪ, ಆರುತಿಂಗಳು ಹಾಸಿಗೆಯಲ್ಲೇ ಒದ್ದಾಡಿದರಂತೆ "ಬೆನ್ನು ಬಗ್ಗಿಸುವುದಕ್ಕಾಗದು, ತ ಲೆತಗ್ಗಿಸುವುದಕ್ಕಾಗದು. ಒಬ್ಬರು ಯುನಾನಿ ಹಕೀಮರು ಒಂದೇ ಒಂದು ವಾರ ದಲ್ಲಿ ಎಲ್ಲಾನೂ ಇಲ್ಲಾ ಅನ್ನಿಸಿಬಿಟ್ಟರಂತೆ. ಎಂಥಾ ಸಮರ್ಥರಿರಬೇಕು" ಎಂದು. ಹೇಳಿದ. ಆ ಮಹಾರಾಯನ ಫೋಟೋ ಇಟ್ಟು, ಅದಕ್ಕೆ ನಮಸ್ಕಾರ ಮಾಡ್ತಾ ತ್ತಿದ್ದಾರಂತೆ, ಅವರು, ವಾರಕ್ಕೆರಡುಸಲ. ಅವರ ವಿಳಾಸ ಪತ್ತೆಮಾಡಿ, ಬೇಗ್ಗ ಅಷ್ಟುಹೊತ್ತಿಗೇ ತರುತ್ತೇನೆ ಅಂತಹೇಳಿ ಪುಟ್ಟು ಹೊರಟುಹೋದ, ಪುಟ್ಟು!

ಸಿಧಾನವಾಗಿ ಮನೆಯೇರಿ ಮಂಚದ ಮೇಲೆ ಪವಡಿಸಿದೆ. ಅಷ್ಟು ಹೊತ್ತಿಗೆ, ತಲೆನೋವು ಪ್ರಾರಂಭವಾಗಿತ್ತು. ಕೈನೋವೂ ಹೆಚ್ಚಿತ್ತು. ಬೆನ್ನಿನ ಕಡೆಗೂ ಸ್ವಲ್ಪ ಹರಡುತ್ತಾ ಇದ್ದಹಾಗೆ ತೋರಿತು......."ಒಳ್ಳೇ ಗ್ರಹಚಾರಕ್ಕಿಟ್ಟು ಕೊಂಡಿತಲ್ಲಾ!....... ಇರಲಿ....... ಹೇಗಾಗುವತನಕ ಬದುಕ್ತಿದ್ರೆ, ನೆಟ್ಟಗೆ, ಡಾಕ್ಟರ್ ಚಟ್ಟಾಥಯನ್ನೇ ನೋಡಿ ಬರುತ್ತೇನೆ! ಬೇಡ, ಧನ್ವಂತರಿಯನ್ನೇ .... ಅದಕ್ಕಿಂತ ಹುಬ್ಬಳ್ಳಿಗೇ ಹೊರಟುಹೋದರೆ [illegible]....... ಅಥವಾ ಯುನಾನಿಯೇಗತಿ [illegible] .... [illegible]....... ಇರಲಿ, ಈಗ [illegible]

ಯಿಂದ ಒಂದು ಗುಟುಕು ನುಂಗಿ ಬಿಡೋಣ," ಎಂದು ಕಿಟಕಿಯ ಕಡೆಗೆ, ಮಲಗಿಕೊಂಡೇ, ಕೈ ನೀಡಿದೆ.

ಯಾವ ಕೈ ನೀಡಿದೆ? ಎಡಗೈ! ನೋ—ವಿ—ಲ್ಲ! ಎಷ್ಟು ಹೊತ್ತು ಅದನ್ನು ನೋಡಲಿಕ್ಕತ್ತಿದೆ. ನೋ—ವಿ—ಲ್ಲ! ಖಾಯಿಲೆಯಾಗಿದ್ದುದು ಬಲಗೈಗೋ ಎಂದು ಅನುಮಾನ ಬಂದಿತು. ಅದನ್ನು ಪರೀಕ್ಷಿಸಿದೆ. ಇಲ್ಲ, ನೋವಿಲ್ಲ! ಎರಡು ಕೈಯನ್ನೂ ಒಟ್ಟಿಗೆ ಎತ್ತಿದೆ. ನೋವಿಲ್ಲ.

ನಿಮಗ್ಯಾರಿಗಾದರೂ ಕೈಗೆ ಖಾಯಿಲೆಯಾಗಿ, ತೋಳಿನಮಟ್ಟಕ್ಕೆ ಅದನ್ನು ಎತ್ತುವಾಗ ನೋವಾದರೆ, ಅಲ್ಲಿ, ಇಲ್ಲಿ, ಅವರಿವರ ಹತ್ತಿರ ಅತ್ತಿಕಾಯ ಹಾಗೆ ಅಲೆಯಬೇಡಿ. ನಾನೊಬ್ಬರ ವಿಳಾಸ ಕೊಡುತ್ತೇನೆ. ಆ ಡಾಕ್ಟರ ಹತ್ತಿರ ಹೋಗಿ. ಇಂಥಾ ಖಾಯಿಲೆಗೆ ಎತ್ತುವ ಕೈ ಅಂದರೆ ಅವರು. ಅವರಿಂದ ಮೂರು ಹೊತ್ತಿನ ಔಷಧಿಯನ್ನು ಒಂದು ಸೀಸೆಯಲ್ಲಿ ತಂದು ದೂರದ ಕಿಟಕಿಯಲ್ಲಿಟ್ಟು ಕೈ ನೀಡಿದರೆ ಸಾಕು, ಆಯುರ್ವೇದವೂ ಬೇಡ, ಯುನಾನಿಯೂ ಬೇಡ.

"ಸಂಗ್ರಾಮ ಗಾದೆಗಳು-ನಮ್ಮೂರಿನವು"

ಎ. ಆರ್. ಸಿ. ಗಾದೆ. "ಊರು ಹೋಗು ಅನ್ನುತ್ತೆ. ಕಾಡು ಬಾ ಅನ್ನುತ್ತೆ."

ಮಾತು ಬರದವನಿಗೆ ಜಗಳವಿಲ್ಲ-ಊಟ ಸಿಕ್ಕವಗೆ ರೋಗವಿಲ್ಲ.

ಇಬ್ಬರ ಜಗಳ-ಮೂರನೆಯವನ ಮರಣ.

ಒಂದಲ್ಲಾ ಬಸ್ಸಿಗೆ-ಸಂದೆಲ್ಲಾ-ಬೇನೆ.

ಊರಿಗೆ ಬಂತು ಉಗಾದಿ-ತೆರಿಗೆಗೆ ಬಂತು ತಗಾದಿ.

ಹೊಟ್ಟೆಗೆ ತಿನ್ನದ ಶೆಟ್ಟಿ ಬಟ್ಟೆ ಹೊಲಿಸಿಕೊಂಡಾನೇ.

ಕಂಡವರ ಭಾವಿಗೆ ಮಕ್ಕಳನ್ನು ನೂಕಿದಹಾಗೆ.

ಕೆಲಸವಿಲ್ಲದ ಕುಂಬಾರ ಯುದ್ಧಕ್ಕೆ ಸೇರಿಕೊಂಡ.

ಹೆತ್ತವರಿಗೆ ಹೆಗ್ಗಣ ಮುದ್ದು-ಸತ್ತವನು ಸಕಲರಿಗೂ ಮುದ್ದು

ಶಂಖದಲ್ಲಿ ಬಂದರೆ ತೀರ್ಥ-ಬಾಧವಿದ್ದರೆ ಶಂಖ.

"ಗಂಡಸರಿಗೊಂದು ಸಲಹೆ"

ಜೇಲೀನೆ ಯಾವಾಗ ಹರಿದರೆ ತೋಟದ ಗತಿಯೇನು? ಮನೇ ಹೆಂಗಸು ಮೀಟಿಂಗಿಗೆ ಹೋಗಿ ಬಂದು ಮನೆಯಲ್ಲಿ ಗಂಡನ ಮೇಲೆ ಠರಾವು ಪ್ಯಾಸು ಮಾಡಿದರೆ ಮಕ್ಕಳ ಪಾಡೇನು? ಮನೆಗತಿಯೇನು? ಯಾವಾಗಿನಿಂದ ಈ ಬಂಗಾಳೀ ಗಂಡಸರು ಸೀರೆ ಉಟ್ಟಹಾಗೆ ಪಂಚೆ ಉಟ್ಟುಕೊಂಡು ಸೆರಗು ಹೊದ್ದುಕೊಳ್ಳಲು ಆರಂಭಿಸಿದರೊ ಆಗಲೇ ಹೆಂಗಸರೆಲ್ಲರೂ ಸೇರಿಕೊಂಡು ಜಬರ್ದಸ್ತು ಮಾಡಲು ಶುರು ಹಚ್ಚಿದರು. ತಿಂಗಳಿಗೊಂದೆರಡು ದಿನ ಅಡಿಗೆಮಾಡಿ ಮಕ್ಕಳ ತೊಟ್ಟಿಲು ತೂಗುತ್ತಿದ್ದ ಪಾಪ ಗಂಡಸಿಗೆ ಈಗ ದಿನಾಲೂ ಅದೇ ಕೆಲಸ ಸ್ಥಿರವಾಗ ಹತ್ತುತ್ತಿದೆ. ಹೀಗಾದರೂ ಪರವಾಗಿಲ್ಲ ಗಂಡಸರ ಕಷ್ಟ ಗಂಡಸರೇ ಅನುಭವಿಸಿಕೊಳ್ಳಬಹುದು. ಇದೂ ಮಿತಿಮೀರಿ ಈಗ ಹೆಂಗಸರು ಗಂಡಸರ ಜತೆಯಲ್ಲೇ ಸಿನಿಮಾಕ್ಕೂ ಸಂಗೀತ ಕಛೇರಿಗೂ, ಗಾಳಿಸವಾರಿಗೂ ಸೈಕಲ್ ಸವಾರಿಗೂ ಹೊರಡ ಹತ್ತಿದ್ದಾರೆ. ಇದು ಖಂಡಿತವಾಗಿಯೂ ಸಹಿಸಲಾರದ ದುಃಖ, ನುಂಗಲಾರದ ತುತ್ತು, ಈಗ ಗಂಡಸರು ಗಂಡಸರಿಗೆ ನೆರವಾಗಿ ಈ ವಿಪತ್ತಿನಿಂದ ಪಾರಾಗಿ ಕೆಲಕಾಲವಾದರೂ ಸುಖದಿಂದಿರಬೇಕು. ಈ ಮಹೋದ್ದೇಶದಿಂದಲೇ ನಾನು ಈ ಲೇಖನದಲ್ಲಿ ನನ್ನ ಅನುಭವವನ್ನು ಬರೆದು, ಇತರ ಗಂಡಸರಿಗೆ ಸಹಾಯ ಮಾಡಲೆತ್ನಿಸಿದ್ದೇನೆ

ಕೆಲವು ದಿನಗಳ ಹಿಂದೆ ನನ್ನ ಸ್ನೇಹಿತನೊಬ್ಬನು ಕೇಳಿದನು "ಅಯ್ಯಾ, ಐಶ್ವರ್ಯವಂತರ ಹೆಣ್ಣುಮಕ್ಕಳನ್ನು ಮದುವೆಮಾಡಿಕೊಳ್ಳುವುದಕ್ಕಿಂತ ಕಷ್ಟತರವಾದುದು, ದುಃಖಕರವಾದುದು ಬೇರೆ ಏನಾದರೂ ಉಂಟೆ?" ಎಂದು. ನಾನಂದೆ 'ಇದೆಯಯ್ಯಾ ಆ ಹೆಂಡತಿಯರ ಜತೆಯಲ್ಲಿ ಸಿನೇಮಾಗೆ ಹೋಗುವುದು' ಎಂದು. ಅವನು ಸಂಪೂರ್ಣವಾಗಿ ಒಪ್ಪಿದನು, ಕಷ್ಟಪಟ್ಟವನು, ಅನುಭವಶಾಲಿ, ಅವನಿಗೆ ವಿಶದೀಕರಿಸಬೇಕಾಗಿರಲಿಲ್ಲ. ಅನುಭವ ಶಾಲಿಗಳಲ್ಲದವರಿಗಾಗಿ ಬರೆಯುತ್ತೇನೆ. ಈ ಹೆಂಡತಿಯರ ಜತೆಯಲ್ಲಿ ಸಿನಿಮಾಗೆ ಹೋದರೆ ಅಲ್ಲಿಗೆ ಬಂದ ಮಿಕ್ಕ ಹೆಂಗಸರ ಸೀರೆ ಒಡವೆ ಅಲಂಕಾರಗಳ ಪಟ್ಟಿಯೊಂದನ್ನು ಬರೆದುಕೊಳ್ಳಬೇಕು. ಸಿನಿಮಾ ಶುರುವಾದ ಮೇಲೆ ಐದೈದು ನಿಮಿಷಗಳಿಗೂ ಕಥೆಯ ಸಾರವನ್ನೂ ನಟನಟಿಯರ ಸಂಭಾಷಣೆಯನ್ನೂ ಇವರುಗಳಿಗೆ ತಿಳಿಸಬೇಕು. ಚಿತ್ರದ ಸಂಭಾಷಣೆಯು ನಡೆಯುವ ವೇಳೆಗೆ, ಈ ಹೆಂಗಸರು ಬಳೆಯ ಶಬ್ದವನ್ನು ಮಾಡಿಯೋ, ಇಲ್ಲವೇ ಇನ್ನು ಯಾವುದಾದರೂ ಶಬ್ದವನ್ನು ಮಾಡಿಯೋ ನಮ್ಮ ಗಮನವನ್ನು ಸೆಳೆಯುತ್ತಾರೆ.

ಹೀಗಾಗಿ ಸಿನೀಮಾವನ್ನು ತಾವು ನೋಡುವುದಿಲ್ಲ. ನಮ್ಮನ್ನೂ ನೋಡ ಬಿಡುವುದಿಲ್ಲ. ಒಂದು ಸಾಯಂಕಾಲ ನರಕವಾಸ ಮಾಡಿದಂತಾಗಿ ಮರಳಿ ಸಿನಿಮಾಗೆ ಖಂಡಿತ ಹೋಗುವುದಿಲ್ಲ ಎಂದು ನಮ್ಮಲ್ಲಿಯೇ ನಾವು ಶಪಥ ಮಾಡಿಕೊಳ್ಳಬೇಕಾಗುತ್ತದೆ. ನನಗೆ ಹೀಗೆಯೇ ಒಂದೆರಡು ಬಾರಿ ದುಃಖ ಪ್ರಾಪ್ತಿಯಾಯಿತು. ಮೂರನೆಯ ಸಾರಿ ಒಂದು ಉಪಾಯ ಹೂಡಿ ಮುಂದೆ ಇಂಥಾ ವಿಪತ್ತುಗಳು ಬಾರದಂತೆ ತಪ್ಪಿಸಿಕೊಂಡೆ. ಅದನ್ನೇ ಹೇಳತೊಡಗಿದ್ದೇನೆ.

ಒಂದು ಸಾಯಂಕಾಲ ಮನೆಗೆ ಹೋದಾಗ, ಮನಸ್ಸು ಸ್ವಲ್ಪ ಅಸ್ಥಿರವಾಗಿದ್ದಾಗ, ಹೆಂಡತಿಯನ್ನು ಅಂದು ಸಿನಿಮಾಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿಬಿಟ್ಟೆ. ಹೇಳಿದ ಕೂಡಲೆ ಮನಸ್ಸನ್ನು ಎಲ್ಲಿ ವ್ಯತ್ಯಾಸ ಮಾಡುವೆನೊ ಎಂದು ಆಕೆಯು ಕಾಲುಗಂಟೆಯಲ್ಲೇ ಸಿಂಗರಿಸಿಕೊಂಡಳು. ಸಿದ್ಧಳಾದಳು. ಆಡಿದ ಮಾತಿಗೆ ತಪ್ಪಲಾರದೆ, ಬೇರೆ ಯೋಚನೆ ಮಾಡಲಾರದೆ, ನಾನವಳನ್ನು ಕರೆದುಕೊಂಡು ಸಿನಿಮಾಕ್ಕೆ ಹೊರಟೆ. ಎಂದಿನಂತೆ "ನೋಡಿ ಅಂದರೆ ಆಕೆಯ ಸೀರೆ ಈಕೆಯ ಹೆರಳು, ಮುಂದಿನವಳ ಬಳೆ" ಎಲ್ಲವೂ ಆಯಿತು. ಸಿನಿಮಾ ಶುರುವಾಯಿತು. ಪ್ರಶ್ನೆಗಳೂ ಶುರುವಾದುವು "ಯಾರು ಅಂದರೆ ಈಗ ಹಾಡುತ್ತಿರುವನು, ಈ ಹುಡುಗಿ ಯಾರು, ಆಚಾರ್ರವಳಂತೆ ಇದ್ದಾಳೆ. ಇವನೇನಂದ" ಇತ್ಯಾದಿ. ನನಗೋ ಬೇಜಾರಾಗಿಹೋಗಿ ಬಿಟ್ಟಿತ್ತು. ಆ ವೇಳೆಗೆ ವಿರಾಮಕಾಲ ಪ್ರಾರಂಭವಾಯಿತು. ಇದೇ ಸಮಯವೆಂದು, ಸಿಗರೇಟ್ ತರುತ್ತೇನೆಂದು ನೆಪಹೇಳಿ ಹೊರಗೆ ಬಂದೆ. ಹತ್ತು ನಿಮಿಷಗಳಾದ ಮೇಲೆ ಒಳಕ್ಕೆ ಹೋದೆ. ಹೋಗುವಾಗ ಬಾಗಿಲಬಳಿ ಯಾರೋ ನನ್ನನ್ನೇ ನೋಡುತ್ತಾ ಪಿಸಪಿಸ ಮಾತನಾಡಿಕೊಳ್ಳುತ್ತಿದ್ದರು. ಹಿಂತಿರುಗಿ ನೋಡಿದಾಗ ನನ್ನ ಹಿಂದೆಯೇ ಲಕ್ಷಣವಾದ ಬೆಡಗಿನ ಹೆಂಗಸೊಬ್ಬಳು ಬರುತ್ತಿದ್ದಳು. ಆಗ ತಿಳಿಯಿತು, ಇವರ್ಯಾಕೆ ನನ್ನ ಕಡೆ ನೋಡುತ್ತಾ ಮಾತನಾಡುತ್ತಿದ್ದರು ಎಂಬುದು. ಸರಿ ಮುಂದೆ ಹೋಗಿ ನನ್ನ ಹೆಂಡತಿಯ ಬಳಿ ಕುಳಿತುಕೊಂಡೆ. ಆಗ ನೋಡಿ ಒಂದು ಯೋಚನೆಯು ಹೊಳೆಯಿತು. ಅಲ್ಲವೇ ನಾನು ಬರುತ್ತಿದ್ದಾಗ ಬಾಗಿಲ ಬಳಿ ಎಲ್ಲರೂ ಪಿಸೋ ಮಾತನಾಡಿಕೊಳ್ಳುತ್ತಿದ್ದರು. ಹಾಗೆಯೇ ಕಿವಿಗೊಟ್ಟು ಕೇಳಿದೆ. ಅವರೇನು ಹೇಳಿದರು ಗೊತ್ತೆ?"

"ಏನು ಹೇಳಿದರು?"

"ನನ್ನ ಕಡೆ ತೋರಿಸುತ್ತಾ, ನೋಡೊ ಆ ಹುಡುಗಿ ಬಳೇಪೇಟೆ ಮೂರನೇ ಸಂದಿಯಲ್ಲಿ ಯಾವಾಗಲೊ ನೋಡಿದ ಹಾಗಿದೆ. ಈ ರಾಯರನ್ನೆಲ್ಲಿ ಹಿಡಿದಳೊ ಇವಳು, ರಾಯರ ಮನೆ ಹಾಳುಮಾಡಿಬಿಡುತ್ತಾಳಲ್ಲೋ" ಎಂದು ಹೇಳಿಕೊಳ್ಳುತ್ತಿದ್ದರು.

ಒಂದೆರಡು ನಿಮಿಷ ನನ್ನಾಕೆ ಸುಮ್ಮನಾಗಿ ಅವಾಕ್ಕಾದಳು-ನಂತರ ಚೇತರಿಸಿಕೊಂಡಳು.

"ನಿಮ್ಮ ಜತೆಯಲ್ಲಿ ಯಾರು ಬಂದರೂ ಆಪತ್ತು ತಪ್ಪುವುದಿಲ್ಲ. ನಿಮ್ಮ ಪ್ರತೀತಿ ಅಷ್ಟು ಲಕ್ಷಣ" ಎಂದು ಸಿಡುಕುತ್ತಾ ಹೇಳಿದಳು.

ಮನೆಗೆ ಹೋಗುವಾಗ,—ಪೂರ್ತಿ ಸಿನಿಮಾವನ್ನು ನೋಡದೆ—ವಾಗ್ದಾನ ಮಾಡಿದಳು. "ಜೀವವಿರುವ ತನಕ ನಿಮ್ಮ ಜತೆಯಲ್ಲಿ ಹೊರಗೆ ಬರುವುದಿಲ್ಲ" ಎಂದು.

ಈಗ ಸಿನಿಮಾಗೆ ಸಂತೋಷವಾಗಿ ಹೋಗಿ ಬರುತ್ತೇನೆ. ಹೋಗುವ ಮುನ್ನ ಬಹಳ ಪ್ರೀತಿಯಿಂದ ಕೇಳುತ್ತೇನೆ "ನೀನೂ ಬರುತ್ತೀಯಾ, ಒಳ್ಳೆಯ ಚಿತ್ರ" ಎಂದು.

ಯಾಕೆ ಹೇಳಲಿಕ್ಕೆ ಬಂದೆ ಎಂದರೆ, ನೀವೂ ತುಂಬಾ ಕಷ್ಟ ಪಟ್ಟಿದ್ದರೆ, ಈ ಉಪಾಯವನ್ನು ಹೂಡಿ.

"ಬಾಳೆಯ ಬಾಳು"

ಅನುಜರಷ್ಟೋತ್ತರರು ಅವತರಿಸಿದ್ದರಾ ಪುಣ್ಯವಂಶದಲಿ. ಚಿಪ್ಪುಗಟ್ಟಿನಂತೆ ಒಟ್ಟುಗೂಡಿ ಸಕಲಕಾರ್ಯಗಳನ್ನೂ ಸಾಧಿಸುತ್ತಿದ್ದರವರು. ಪೀತ ವಸ್ತ್ರಗಳನ್ನುಟ್ಟು ಕಿರೀಟವನ್ನಿಟ್ಟು ಮೆರೆಯುತ್ತಿದ್ದರಾ ಏಕ ಶಾಖಾವಲಂಬಿಗಳು. ದೇವಕಾರ್ಯಕ್ಕಾಗಿ ಮುಂದುವರಿದು, ಅಗ್ರಜನ ವಿನಾ, ಉಳಿದವರೆಲ್ಲರೂ ತಮ್ಮ ತನುಗಳನ್ನು ಧಾರೆಯೆರೆದಿದ್ದರು.

ಇಂದು ಅಗ್ರಜನೂ ದೇವಕಾರ್ಯದ ಸಲುವಾಗಿ ಶರೀರವನ್ನರ್ಪಿಸಲು, ಉತ್ಸಾಹದಿಂದ ಪತ್ರಶಯನದಲ್ಲಿ ಮುಣಿದು ಮಲಗಿದ್ದನು. ದೇವದೂತರೀರ್ವರು ಬಂಧವನೆದುರಿನಲ್ಲಿ ನಿಂತರು. ಈತನನ್ನು ಶಾಸ್ತ್ರರೀತಿಯಾಗಿ ದೇವಿಗೆ ಬಲಿ ಕೊಟ್ಟರು. ದೇವೀ ಪ್ರಸಾದವೆಂದು ಆತನ ದೇಹವನ್ನು ಹಿಡಿದು, ಸೊಕ್ಕು ಮುರಿಯುವಂತೆ ತೊಟ್ಟು ಮುರಿದು, ಚರ್ಮವನ್ನು ಸುಲಿದೆಸೆದು, ಎರಡು ಭಾಗಗಳನ್ನಾಗಿ ಮಾಡಿ, ದೇವದೂತರೀರ್ವರೂ ಅವನನ್ನು ಭುಜಿಸಿದರು. ಭುಜಿಸಿದ ನಂತರ ಚಪ್ಪರಿಸುತ್ತ ಒಬ್ಬರಿಗೊಬ್ಬರು ಹೇಳಿದರು.

"ಈ ರಾಜ ಬಾಳೆ ಬಲು ರುಚಿಯಾಗಿತ್ತಲ್ಲವೇ"

ಸಿನಿಮ ಮನೆ

[ಕೆ. ವಿ. ಪುಟ್ಟಪ್ಪನವರ ಲಲಿತಾದ್ರಿ ಎಂಬ ಪದ್ಯದ ಪ್ರಭಾವದಿಂದ ಬರೆದದ್ದು]

ದಿನದ ಹೋರಾಟದಲಿ
ಬಗೆಕದಡಿ ಕಂಗೆಡಲು
ನೇಹಿಗನೆ, ಬಾ ! ಇತ್ತ,
ಸಿನಿಮ ಮನೆಗೆ !
ಬಳಲಿಕೆಯ ಪರಿಹರಿಸೆ
ದಿಂಬುಗಳ ಪೀಠವಿದೆ.
ನೋಡಿಸಲು ಕಂಗಳನು
ಕಂಗೊಳಿಪ ಚಿತ್ರವಿದೆ.
ಗಂಟಲನು ತಂಪಿಡೆ
ಹೊಸ ಪಾನೀಯವಿದೆ.
ಮತ್ತವನು ಬಿಸಿಮಾಡೆ
ಬತ್ತಿಯಿದೆ, ಧೂತ್ರಿಸಲು.
ನೂರಾರು ದೀಪಗಳು
ಸಾಲಾಗಿ ಕಣ್ ಮುಚ್ಚಿ
ಎದುರಿನಲಿ ಕೊಂಕಾಗಿ
ಗೊಂಚಲಲಿ ಗುಂಪಾಗಿ
ಹಾಡುತ್ತ ನಲಿಯುತ್ತ
ಛಾಯೆಗಳು ಸಾಗಿ ಬರೆ
ನೆರಳಾಗಿ ಮಿಂಚಿ ಬರೆ
ಬೆರಗಾಗಿ ಮರುಳಾಗಿ
ಕೂತು ನೋಡು !
ದೇಹ ಪಂಜರದಲ್ಲಿ
ಹಸಿವೆಂಬ ಹುಲಿಬಿದ್ದು
ತಾಳವನು ಬಡಿಯುತಿರೆ
ಬಾಳೆಲ್ಲ ಕುಗ್ಗಿ ಬರೆ
ಕಂಬನಿಗಳುರುಳುತಿರೆ
ಸಾಲಗಾರರ ತಂಡ
ದಂಡವನು ತಿರುಹಿ ಬರೆ
ಧೈರ್ಯದಲಿ ಕತ್ತಲಲಿ

ಕೂತು ನೋಡು !
ತಾರೆಗಳ ದಿಬ್ಬಣವು
ನೆಳಲು ಬೆಳಕಲಿ ಬಂದು
ಕುಣಿ ಕುಣಿದು ಕೂರಿ ಕೊರೆದು
ಹಾಡಿ ಹಲ್ ಕಿರಿಯುತ್ತ
ಪರದೆ ಬೆಸಲಾದಂತೆ
ಸಗ್ಗ ನೆಲಕಿಳಿದಂತೆ
ತೆಕ್ಕನೆಯೆ ಸಾಹಿತ್ಯ
ಕೆಸರಲ್ಲಿ ಬಿದ್ದಂತೆ
ರಸಋಷಿಯ ಕಾವ್ಯಗಳು
ಹೊಸವೇಷವಾಂತು ಬರೆ
ಬಾ, ನೋಡು, ಕೂತಿಲ್ಲಿ !
ಮೂಕನಾಗಿ,
ದುಡ್ಡನ್ನು ಕರಗಿಸಲು
ಡಬ್ಬಿಗನೆ ಬಾ ಇಲ್ಲಿ !
ಗಾನವನು ಕಲಿಯುವ್ರೊಡೆ
ಗಾಡಿಯನ ! ಬಾ ಇಲ್ಲಿ !
ಓದನ್ನು ಮರೆಯುವ್ರೊಡೆ
ಓದುಗನೆ, ಬಾ, ಇಲ್ಲ !
ದಿನದ ಹೋರಾಟದಲಿ
ಬಗೆಕದಡಿ ಕಂಗೆಡಲು
ನೇಹಿಗನೆ, ಬಾ, ಇಲ್ಲಿ,
ಸಿನಿಮ ಮನೆಗೆ.

ರಾಜೀವಪುರದ ರಾಜಕೀಯ
"ಮೈಲಿ ಮುಖಂಡರು"

ಹಿಂದಿನ ಹಿಂದೂಸ್ಥಾನದಲ್ಲಿ ರಾಜೀವಪುರವೆಂಬ ಒಂದು ಸಂಸ್ಥಾನ, ಈ ಸಂಸ್ಥಾನದ ರಾಜನ ಹೆಸರು ರಾಜೀವ ಪ್ರಭು. ರಾಜನಿಗೆ ಒಂದು ಮಂತ್ರಿ. ಒಂದು ಮಂತ್ರಿ ಮಂಡಳಿ. ಎಲ್ಲಾ ಸಂಸ್ಥಾನಗಳಂತೆಯೇ ಇಲ್ಲಿಯೂ ಒಂದು ಪ್ರಜಾಸಭೆ. ರಾಜೀವಪುರವೇ ಮುಖ್ಯ ಪಟ್ಟಣ. ಅಲ್ಲಿಯೇ ಸರಕಾರವಿರುವುದು.

ಸಂಸ್ಥಾನದ ಸುತ್ತಳತೆ ಸುಮಾರು ಹತ್ತು ಸಾವಿರ ಮೈಲಿ. ಇದನ್ನು ಹತ್ತು ಭಾಗಗಳನ್ನಾಗಿ ವಿಂಗಡಿಸಿ, ರಾಜ್ಯಭಾರ ನಡೆಸುತ್ತಿದ್ದರು. ಸಂಸ್ಥಾನದ ನಕ್ಷೆಯನ್ನು ಕೊಡುವುದು ಕಾಲವ್ಯರ್ಥ—ಏಕೆಂದರೆ ತಿಂಗಳು ತಿಂಗಳಿಗೂ ಸಂಸ್ಥಾನದ ನಕ್ಷೆಯೇ ವ್ಯತ್ಯಾಸವಾಗುವ ಪರಿಸ್ಥಿತಿ ಬಂದೊದಗಿದ್ದಿತು. ಸಂಸ್ಥಾನದಲ್ಲಿ ಎಲ್ಲಾ ಸೌಭಾಗ್ಯಗಳೂ ಇದ್ದುವು, ಉದಾ: ಪೋಲೀಸು, ಅರಣ್ಯ, ಸಿಪಾಯಿಸೈನ್ಯ ಇತ್ಯಾದಿ.

ರಾಜೀವಪುರದಲ್ಲಿ ಜೀವನವು ಬಹಳ ದುಬಾರಿ ಹಾಲು ಮೊಸರುಗಳು ಮೊದಲುಗೊಂಡು, ಎಲ್ಲಾ ಸಾಮಾನುಗಳೂ ತಗ್ಗು. ದೀಪ, ನೀರು, ಕಡೆಗೆ ಉಸಿರಾಡುವ ಗಾಳಿಗೂ, ತೆರಿಗೆಗಳು. ಮನೆ ಬಾಡಿಗೆ ಹೆಚ್ಚು. ಹೀಗಾಗಿ ಇಲ್ಲಿನ ದೊಡ್ಡ ದೊಡ್ಡ ಹುದ್ದೆದಾರರಿಗೆ ಸಂಬಳ ಸಾಕಾಗುತ್ತಿರಲಿಲ್ಲ. ಎರಡು ಮೂರು ತಿಂಗಳುಗಳಿಗೆ ಇವರಿಗೆ ಹಣದ ಬಿಕ್ಕಟ್ಟು ಬಹು ಬಿಗಿಯಾಗುತ್ತದೆ ಆಗ ಈ ಹುದ್ದೆದಾರರು ಸಂಸ್ಥಾನಾದ್ಯಂತ ಪ್ರವಾಸ ಹೊರಡುತ್ತಾರೆ. ಒಂದು ಪಕ್ಷ, ಒಂದು ವಾರವಾದರೂ ಪ್ರವಾಸಮಾಡಿದರೆ, ಸರಕಾರದಿಂದ ಪ್ರವಾಸ ಧನವು ದೊರೆಯುತ್ತದೆ. ಹೊರಗಿದ್ದಷ್ಟು ದಿನವೂ ನೌಕರರ ಅತಿಥಿಗಳಾಗಿರಬಹುದು. ಈ ಚಾತುರ್ಯದಿಂದ ಇವರುಗಳ ಆರ್ಥಿಕ ಬಿಕ್ಕಟ್ಟು ಸಡಿಲವಾಗುತ್ತದೆ. ನಂತರ ಮುಖ್ಯ ಪಟ್ಟಣಕ್ಕೆ ಹಿಂತಿರುಗುತ್ತಾರೆ. ಇದು ಪ್ರವಾಸ ನಿಯಮ.

ಈ ಪ್ರವಾಸದ ಏರ್ಪಾಡುಗಳು ಅಷ್ಟೇನೂ ಸುಲಭವಲ್ಲ. ರೈಲು ಹಾದಿ ಇರುವ ಊರುಗಳಿಗೆ ಪ್ರವಾಸ ಮಾಡಿದರೆ ಸಾಕಷ್ಟು ಅಥವಾ ಬೇಕಾದಷ್ಟು ಹಣವು ದೊರೆಯುವುದಿಲ್ಲ. ರೈಲಿಲ್ಲದೇ ಬರೀ ಮೋಟಾರು ಹಾದಿಯಲ್ಲಿ ಹೋದರೆ ಮೈಲಿಭತ್ಯ ದೊರೆಯುತ್ತದೆ. ಅಂದಮೇಲೆ ಈ ಪ್ರವಾಸವನ್ನು ಆ ಮೋಟಾರು ಹಾದಿಗಳಲ್ಲೇ ಏರ್ಪಡಿಸಬೇಕು. ಆ ಹಾದಿಯಲ್ಲಿ ರೈಲು ಅನುಕೂಲವಿರಬಾರದು. ಉದಾಹರಣೆಗೆ, ಬೆಂಗಳೂರಿನಿಂದ ತುಮಕೂರಿಗೆ ಹೋಗಬೇಕೆನ್ನಿ. ನೇರನೆ ಕುಣಿಗಲ್ಲಿನಲ್ಲಿ ಕೆಲಸ ಇಟ್ಟುಕೊಂಡು ಅಲ್ಲಿಗೆ ಮೊದಲು ಹೋಗಬೇಕು. ಅಲ್ಲಿ ಕೆಲಸವು ಮುಗಿಯುವುದರೊಳಗೆ, ತುಮಕೂರಿಗೆ ಒಂದು ದಿನ ಹೋಗಿಬರಬೇಕು. ತಿರುಗಿ ಕುಣಿಗಲ್ಲಿನಲ್ಲಿ ಕೆಲಸ ಒಂದುದಿನ ಮಾಡಿ

ಮುಗಿಸಿ, ಬೆಂಗಳೂರಿಗೆ ಹಿಂತಿರುಗಬೇಕು. ಈ ಪ್ರವಾಸ ಪಟ್ಟಿಯನ್ನು ತಯಾರು ಮಾಡುವುದರಲ್ಲಿ ಕೆಲವು ನೌಕರರು ಪ್ರವೀಣರು. ಈ ನೌಕರರಲ್ಲಿ ಅಗ್ರಗಣ್ಯರಾದವರನ್ನು ಹುದ್ದೇದಾರರು ತಮ್ಮ ಸ್ವಂತ ನೌಕರಿಗೆ, ಆತ್ಮೀಯ ಕಾರ್ಯದರ್ಶಿಗಳಾಗಿ ನಿಯಮಿಸಿಕೊಳ್ಳುವರು. ಬಹಳ ಜೋಡಿಯಾದ ಈ ಆತ್ಮೀಯ ಕಾರ್ಯದರ್ಶಿಗಳನ್ನು ಹೊಂದಿರುವ ಹುದ್ದೆದಾರರನ್ನು 'ಮೈಲಿ ಮುಖಂಡರು' ಎಂದು ಜನರು ಗೌರವಿಸುವರು, ಈ ಮೈಲಿ ಮುಖಂಡರನ್ನು ಕಂಡರೆ ಮಿಕ್ಕ ಹುದ್ದೇದಾರರಿಗೆ ಸ್ವಾಭಾವಿಕವಾದ ಅಸೂಯೆ.

ರಾಜೀವ ಪುರದ ಪಶ್ಚಿಮಂಚಿನಲ್ಲಿ ಒಂದು ಹಳ್ಳಿ. ಅದರ ಸುತ್ತಲೂ ಕಾಡುಪ್ರದೇಶ. ಅದರ ಹೆಸರು 'ಆನೆನಡಸಿ'. ರಾಜೀವ ಪುರದಿಂದ ಇಲ್ಲಿಗೆ ೬೦ ಮೈಲಿ ಫಾಸಲೆ. ರೈಲು ಮಾರ್ಗವೆಲ್ಲೂ ಇಲ್ಲ. ಹೀಗಾಗಿ ಮೈಲಿ ಮುಖಂಡರೆಲ್ಲಾ ವರುಷಕ್ಕೆ ಮೂರು ಬಾರಿಯಾದರೂ ಈ ಹಳ್ಳಿಗೆ, ಅರಣ್ಯದ ತನಿಖೆಯ ನೆಪದಿಂದ, ಪ್ರವಾಸಗೊಳ್ಳುವರು. ಸರಕಾರದಲ್ಲಿ ನಾಲ್ಕು ಮೈಲಿ ಮುಖಂಡರಿದ್ದರೆ, ವರ್ಷವೆಲ್ಲಾ ಯಾರಾದರೂ ಇಲ್ಲಿ ಪ್ರವಾಸಗೈಯುತ್ತಲೇ ಇರುವರು. ಹೀಗಾಗಿ ಆನೆನಡಸಿಯ ಶ್ಯಾನುಭೋಗನಿಗೆ ಈ ವಿಚಾರದಲ್ಲಿ ಬಹಳ ಅನುಭವ. ಆನೆನಡಸಿಗೆ ಬಂದಮೇಲೆ ಮುಖಂಡರ ಆತಿಥ್ಯವೆಲ್ಲಾ ಅವನದೇ. ಅವರ ಮುಂದಿನ ಪ್ರವಾಸವೆಲ್ಲಾ ಆತನೇ ರಚಿಸಬೇಕು. ಬರುವ ಮುಖಂಡರ ಅನುಗುಣವಾಗಿ, ಬರುವ ಮೂರುದಿನ ಮುಂಚೆಯೇ ಶ್ಯಾನುಭೋಗನು ಬದನೇಕಾಯಿ, ಈರುಳ್ಳಿ, ಕೋಳಿ, ಕುರಿ ಇತ್ಯಾದಿಗಳ ಬೇಟೆಗೆ ಆರಂಭಿಸುವನು. ಕಛೇರಿಯ ಕಾಗದಗಳ ಧೂಳನ್ನು ಹೊಡೆಸಲಾರಂಭಿಸುವನು. ರಸ್ತೆಗೆಲ್ಲಾ ಕೆಮ್ಮಣ್ಣು ಎರಚಿಸುವನು, ತಿಳಿನೀರನ್ನು ತರಿಸಿ ಎರಚಿಸುವನು.

ನಾನೊಂದು ಬಾರಿ ಆನೆನಡಸಿಗೆ ಹೋಗಿದ್ದೆ. ಅಲ್ಲಿನ ಶ್ಯಾನುಭೋಗನ ಮಗನು ನನ್ನ ಸ್ನೇಹಿತ. ಸ್ನೇಹಿತನನ್ನು ನೋಡುವ ಪ್ರಸಕ್ತ ಅಲ್ಲಿಗೆ ಹೋಗಿದ್ದೆ. ನಾನು ಹೋದಾಗಲೇ ಅಲ್ಲಿಗೆ ಮೈಲಿ ಮುಖಂಡನೊಬ್ಬನು ಅಲ್ಲಿಗೆ ಬಂದನು. ಬಂದವನೇ ಮಧ್ಯಾಹ್ನದ ಊಟಮಾಡಿಕೊಂಡು ಶ್ಯಾನುಭೋಗರೊಡನೆ ಸುತ್ತುಮುತ್ತ ಅರಣ್ಯದ ತನಿಖೆಗಾಗಿ, ಹಳ್ಳಿಗರ ಹವಾಲು ಕೇಳಲಿಕ್ಕಾಗಿ ಕುದುರೆಯನ್ನೇರಿ ಶ್ಯಾನುಭೋಗನೊಡನೆ ಹೊರಟನು. ಶ್ಯಾನುಭೋಗನು ಹಿಂತಿರುಗಿದಾಗ ಸಾಯಂಕಾಲವಾಗಿತ್ತು. ಬಹಳ ಸುಸ್ತಾಗಿದ್ದನು. "ಏನು ಶ್ಯಾನುಭೋಗರೇ. ಇಷ್ಟು ಹೊತ್ತು ಎಲ್ಲಿಗೆ ಹೋಗಿದ್ದಿರಿ. ಇಷ್ಟು ಸುಸ್ತಾಗಿದ್ದೀರಲ್ಲ" ಎಂದು ಕೇಳಿದೆ. ಆಗ ಶ್ಯಾನುಭೋಗನು ಹೇಳಿದನು "ನೋಡಪ್ಪಾ ಇವತ್ತು ಮುವತ್ತಾರು ಮೈಲಿ ಸುತ್ತಿ ಬಂದಿದ್ದೇವೆ. ಅಂದರೆ ನಮ್ಮ ಸಾಹೇಬರಿಗೆ ಮೂವತ್ತಾರು ರೂಪಾಯಿ ಬರಮಾನ ಆಯಿತು" ನಾನು ಕೇಳಿದೆ "ಈ ಹಳ್ಳಿಯಿಂದ ಎಲ್ಲೆಲ್ಲಿ ಹೋದರೂ ಎರಡು ಮೈಲಿ ಆಗುವುದಿಲ್ಲವಲ್ಲಾ, ಮೂವತ್ತಾರು ಮೈಲಿ ಹೇಗೆ ಹೋದಿರಿ?" ಎಂದೆ.

ವ್ಯಾಸುಘೋಷನು ಹೇಳಿದನು. "ನೀವೇ ನಾಳೆಯ ದಿನ ಹೋಗಿ ಬನ್ನಿ. ನಿಮಗೆ ಗೊತ್ತಾಗುತ್ತೆ. ನಿಮ್ಮ ಜತೆಗೆ ಜವಾನನೊಬ್ಬನನ್ನು ಕಳಿಸುತ್ತೇನೆ" ಎಂದು.

ಆಗಲೆಂದು ಮರುದಿನ ನಾನೂ ಹೊರಟೆ. ಒಂದೊಂದು ಅರಣ್ಯದಲ್ಲೂ ಕೆಮ್ಮಣ್ಣಿನ ಕಾಲು ದಾರಿ. ಕಾಲು ದಾರಿಯಲ್ಲಿ ಹೋದರೆ ಎರಡು ಮೈಲಿಯ ಅರಣ್ಯದಲ್ಲಿ, ಈ ನೂರನತ್ತಾರು ಮೈಲಿಗಳ ದೂರವೆಲ್ಲವೂ ರಚಿತವಾಗಿತ್ತು. ನೂರು ಮೈಲಿಗಳದೂರದಲ್ಲಿ ಅಲ್ಲಲ್ಲೇ ಒಡೆದ ಎಳೆ ನೀರು. ಇತ್ಯಾದಿ.

ಆಗ ತಿಳಿಯಿತು ವ್ಯಾಸುಘೋಷನು ಏಕೆ ಮೆಚ್ಚಿಗೆಯ ನೌಕರನಾದನೆಂದು.

ಮುಂದಿನ ಬಾರಿ ರಾಜೀನ ಪುರದ ರೈಲ್ವೆಯವರ ವಿಚಾರ ತಿಳಿಸುತ್ತೇನೆ.

ಕಾಲೇಜು ಮುಕ್ತಕಗಳು

೧. ಕಾಲೇಜು ನೋಡಿದಿರಾ? ಹಂತ ಹಂತದ ಹಾಲು,
ಶಾಲೆಯ ಒಳಗೆ ಗಿಣಿಹಿಂಡು! ಕೂಗಾಡಿ
ಬಾಲಕರ ದಂಡು ಬಲುಚಂದ,

೨. ಓದೋದಿ ಬಾಯ್ನೊಂದು, ಬರೆಬರೆದು ಕೈನೊಂದು,
ಸುಟ್ಟಲಹತ್ತಿ ನಡುನೊಂದು! ಶಿವಪ್ಪ
ಬಿ. ಎ. ಎಂಬೋಡಿಗ್ರಿ ದಯಮಾಡೋ.

೩. ಅಪ್ಪ! ನಿನ್ನರಿಕ್ಕೆ ಇಪತ್ತು ಕುತಾರೆ
ತುಪ್ಪ ಹೂದಂಗೆ ಚೆಪರೀದೆ! ಇನ್ನೇಲಿ
ತಿಪ್ಪಗೆ ಮನೆಯಲ್ಲಿ ಉಂಡಾಡು.

೪. ಪರೀಕ್ಷೆಗ್ಹೋಗ್ತೀನಿ; ದಯವಿರಲಿ ಚಾಮುಂಡಿ!
ಪ್ರಶ್ನೆ ಗೊತ್ತಾಗ್ಲಿ, ಎದುರಾದ್ರೆ! ಮ್ಯಾಡಮ್..!
ಗಂಡೆ ಪತ್ತೀಗೆ ಹರಿಮಾಡು

೫. ಮಹಾರಾಜಾ ಕಾಲೇಜ್ಗೆ ಹುಳ್ಳಿಲ್ಲ ಕಲ್ಲಿಲ್ಲ!
ತಾರಾಮ್ಮ ದಿನವೆಲ್ಲಾ! ಅಲ್ಲಲ್ಲಿ
ಸರಸದ ಮಾತುಗಳು ಕೇಳುತ್ತವೆ.

೬. ಡಿಗ್ರಿಯ ತಕ್ಕೊಂಡು, ಕೋಟ್ ಹಾಕಿಕೊಂಡು..
ಸಾವಿರ ಹಣಗಳಿಸ್ಕೊಂಡು ಬರುತ್ತೀನ
ಬಂಡೀದಾರೆಲ್ಲಾ ಬಿಡಮುತ್ತು!!

ಕೊಲಾ ಕೋವಿದ

ತಿಮ್ಮರಾಯಪ್ಪನವರು ರೈಲುಗಾಡಿ ಬೆಂಚಿನ ಮೇಲೆ ಕುಳಿತಿದ್ದರು. ಆದರೂ ಅವರ ಮನಸ್ಸು ಕಾವ್ಯಪ್ರಪಂಚದಲ್ಲೇ ತೇಲಾಡುತ್ತಿತ್ತು. ಯಾಕೆಂದರೆ, ಅವರು ಕವಿಗಳು. ಮೇಲಾಗಿ ಕಾದಂಬರಿಗಳನ್ನೂ ಬರೆದವರು. ಸೋನಾರಿ ಗ್ರಂಥಮಾಲೆಯ ಹದಿನಾರನೆಯ ಕುಸುಮವೇ ಅವರ ಎರಡನೆಯ ಕಾದಂಬರಿ. ಮೊದಲನೆಯದನ್ನು ಇನ್ನೂ ಯಾರೂ ಪ್ರಕಟಿಸಿರಲಿಲ್ಲ; ಅಂತಹ ಕೆಚ್ಚೆದೆಯ ಪ್ರಕಾಶಕರು ಇನ್ನೂ ಈ ಬಡನಾಡಿನಲ್ಲಿ ಮೂಡಿಬಂದಿಲ್ಲ. ಅವರ ಕಾದಂಬರಿಯ ಹೆಸರು "ಕೊಲಾಕೋವಿದ." ಅದು ಹೊರಬಿದ್ದ ಕೂಡಲೇ ತನ್ನನ್ನು ಕನ್ನಡಿಗರೆಲ್ಲರೂ ಕೊಂಡಾಡುವರೆಂದೂ ಇತರ ಮಾಲೆಯವರು ತನ್ನ ಲೇಖಣಿಯಿಂದುದುರಿದ ಕುಸುಮಗಳಿಗಾಗಿ ಕಾರ್ಡುಗಳನ್ನು ಬರೆಯುವರೆಂದೂ ತಿಮ್ಮರಾಯಪ್ಪನವರು ಕಾತುರರಾಗಿದ್ದರು. ದಂಡ ಪ್ರಣಾಮಗಳೊಂದಿಗೆ ತಾನು ಕನ್ನಡಮ್ಮನ ಹಿರಿಯ ಮಕ್ಕಳಾದ ಎ. ಬಿ. ಸಿ ಅವರಿಗೂ ಎಕ್ಸ್. ವೈ. ಜೆಡ್ ರವರಿಗೂ ಕಾಣಿಕೆಯಾಗಿ ಅರ್ಪಿಸಿದ ಪ್ರತಿಗಳಿಗೆ ಬದಲಾಗಿ ಅವರಿಂದ ಒಂದು ಗೆರೆ ಕೂಡ ಈಚೆಗೆ ಬರಲಿಲ್ಲ. ಅವರಿಗೆ ಮಾಡಿದ ಪ್ರಣಾಮ ದಂಡ, ಅಷ್ಟೆ. ಒಂದೆರಡು ಪತ್ರಿಕೆಗಳಲ್ಲಿ "ಸಾದರ ಸ್ವೀಕಾರ" ಎಂಬ ಶಿರೋನಾಮೆಯ ಕೆಳಗೆ "ಕೊಲಾ ಕೋವಿದ"– ಒಂದು ಪತ್ತೇದಾರಿ ಕಾದಂಬರಿ., ಸೋನಾರಿ ಗ್ರಂಥಮಾಲೆಯ ೧೬ನೇ ಕುಸುಮ.... ಬೆಲೆ ?.... ಎಂದುಮಾತ್ರ ಅಚ್ಚಾಗಿದ್ದುದನ್ನು ಅವರು ಕತ್ತರಿಸಿಟ್ಟುಕೊಂಡಿದ್ದರು. ತನ್ನ ಪುಸ್ತಕವನ್ನು ಕೊಂಡವರು ಹಾಗಿರಲಿ, ಓದಿದವರೂ ಕೂಡ ಇಲ್ಲವೆಂಬ ಘೋರಸತ್ಯವು ತಿಮ್ಮರಾಯಪ್ಪನವರ ಎದೆಯನ್ನಿರಿಯಿತು.

ಆಗ, ಅವರೆದುರು ಕುಳಿತಿದ್ದವರೊಬ್ಬರು ಟ್ರಂಕನ್ನು ತೆರೆದು ಒಂದು ಪುಸ್ತಕವನ್ನು ಎತ್ತಿ ಹಿಡಿದು ಓದುವುದಕ್ಕೆ ಪ್ರಾರಂಭಿಸಿದರು! "ಕೊಲಾ ಕೋವಿದ"!

ತಿಮ್ಮರಾಯಪ್ಪನವರಿಗೆ ಸಿಡಿಲು ಬಡಿದಂತಾಯಿತು. ತಮ್ಮ ಗ್ರಂಥವನ್ನು ತಮ್ಮೆದುರು ಕುಳಿತು ಓದುತ್ತಾ ಇದ್ದಾರೆ ಆ ಮಹಾನುಭವರು! ತಾನು ಕುತೂಹಲದಿಂದ ಓದಿ ಆನಂದಿಸುತ್ತಿರುವ ಪತ್ತೇದಾರಿ ಕಥೆಯನ್ನು ಬರೆದ ಪ್ರಖ್ಯಾತ ಎದುರಿಗಿರುವುದೇ ಆತನಿಗೆ ತಿಳಿಯದು! ಎಂತಹ ವಿಚಿತ್ರ ಸನ್ನಿವೇಶ.

ಸುಮಾರು ೬೦-೬೫ನೆಯ ಪುಟವನ್ನೇ ಆತ ಓದುತ್ತಿರಬೇಕೆಂದು ತಿಮ್ಮರಾಯಪ್ಪನವರು ಊಹಿಸಿದರು. ಸುಮಾರು ೬೦ ನೆಯ ಪುಟದಲ್ಲೇ ಗ್ರಂಥದ ಮೊದಲನೆಯ ಕೊಲೆಯಾಗುವುದು. ಆ ಭಾಗವನ್ನೇ ಆತ ಓದುತ್ತಿರಬೇಕೆಂದು ತೋರಿತು. ಏಕೆಂದರೆ, ಆತನ ಮುಖ ಗಂಟುಗಂಟಾಯಿತು; ಹುಬ್ಬುಗಳೆರಡೂ ಕೊಂಚ ಮೇಲಕ್ಕೆ ಹಾರಿದುವು.

ತಿಮ್ಮರಾಯಪ್ಪನವರಿಗೆ ತಡೆಯುವುದೇ ಕಷ್ಟವಾಯಿತು. ಅವರು ಕೊಂಚ ಕೆಮ್ಮಿದರು. 'ಸಾರ್' ಎಂದರು. 'ಸ್ವಾಮಿ' ಅಂದರು. ಎದುರಿಗಿದ್ದವರು ಪುಸ್ತಕವನ್ನು ಕೆಳಕ್ಕಿಳಿಸಿದರು. "ಏನೂ ಇಲ್ಲ! ತಾವು ಓದುತ್ತಿದ್ದ ಪುಸ್ತಕ...." ಎಂದು ಮಾತಿಗೆ ಪ್ರಾರಂಭಿಸಿದರು, ಯಾವುದೋ ಏನೋ ಗಂಟಲಿಗೆ ಸಿಕ್ಕಿಕೊಂಡಿತು ಆಗ, ಆತ, "ತಕ್ಕೊಳ್ಳಿ! ಬೇಕಾದರೆ ಓದಿ!" ಎಂದು ಹೇಳುತ್ತಾ ಕೊಲಾಕೋವಿದವನ್ನು ತಿಮ್ಮರಾಯಪ್ಪನವರ ಮಡಿಲಲ್ಲೇ ಎಸೆದರು!

"ಬೇಡಿ, ಬೇಡಿ! ಒಳ್ಳೇ ಸ್ವಾರಸ್ಯವಾದ ಭಾಗವನ್ನ ತಾವು, ಓದುತ್ತಿದ್ದ ಹಾಗೆ ಕಾಣಿಸಿತು....ನೀವೇ ಓದಿ...." ಎಂದು ತಿಮ್ಮರಾಯಪ್ಪನವರು ಪುಸ್ತಕವನ್ನು ಮಡಿಲಿಂದ ಎತ್ತಿ ಕೈಗೆ ತೆಗೆದುಕೊಂಡರು. "ಸ್ವಾರಸ್ಯ! ಸ್ವಾರಸ್ಯವನ್ನ ಕೊಲೆಮಾಡುವುದರಲ್ಲಿ ಈ ಗ್ರಂಥಕರ್ತನೇ ಕೋವಿದ; ಮೂರನೆ ಪುಟ ಓದುವಾಗಲೇ ಮೂಲೆಗೆ ಎಸೆಯಬೇಕಾಗುತ್ತವೆ ಪುಸ್ತಕಾನ" ಎಂದು ಅವರು ಹೇಳಿದಾಗ, ತಿಮ್ಮರಾಯಪ್ಪನವರು ಮೂರ್ಛೆಹೋದರು. ಅಲ್ಲೇ ಇದ್ದ ಮತ್ತೊಬ್ಬರು, "ಹಾಗಾದರೆ ತಾವು ಓದುತ್ತಿದ್ದದ್ದು ಯಾವ ಪುಟ?" ಅಂತ ಕೇಳಿದರು. ಅದಕ್ಕವರು, "ಅದರೊಳಗೆ ನನ್ನ ಮಾವ ಬರೆದ ಒಂದು ಕಾಗದ ಇಟ್ಟಿದ್ದೇನೆ ಅದನ್ನ ತೆಗೆದು ನೋಡುತ್ತಾ ಇದ್ದೆ, ಅಷ್ಟೆ!" ಎಂದು ಉತ್ತರವಿತ್ತರು.

ಇಂದಿನ "ಸರ್ವಜ್ಞ"

ಪೊಳ್ಳು ಕಗ್ಗವ ಗೀಚಿ, "ಕನ್ನಡಂ ಗೆಲ್ಗೆಂದು"
ಹಲ್ಲುಕಿರಿದಾಕೆಗೆ ಕೊಡುವಾತ ಕೇಸರಿಗೆ,
ಹುಲ್ಲು ಕೊಟ್ಟಂತೆ, ಸರ್ವಜ್ಞ.

ಕನ್ನಡದಿ ಇಂಗ್ಲೀಷ್ ಕಿಂಚಿತ್ತು ಬೆರೆಸಲದು
ಸಿನ್ನುಗಳ ಲಿಸ್ಟಿನಲಿ ಹೈಯಿಸ್ಟು ಅದರಿಂದ
ಫನ್ನಿಗೂ ಮಿಕ್ಸದಿರು, ಸರ್ವಜ್ಞ.

ಹಸುಳೆ ಮಕ್ಕಳ ಹಿಂಡಿ ಹಿಸಿದು ಪ್ರಾಡಿಜಿಮಾಡಿ
ಕಸಿದು ಕಾಸನುತಿಂಬ, ನರಮನುಜ
ರಸುರರೇ ಅಕ್ಕು, ಸರ್ವಜ್ಞ.

ಇದ್ದಿದ್ದ ಕೊಟ್ಟುಬಿಡು, ಇಲ್ಲದ್ದ ಬಿಟ್ಟುಬಿಡು,
ಬಿದ್ದರೇ ಬಾಸುಂಡೆ, ಮೆದ್ದುಬಿಡು, ಇನ್ನನೂರು
ಹೆಪ್ಪಾರಿ ಹೆಡ್ಡರಿಗೆ, ಸರ್ವಜ್ಞ.

ಹಿಂದಿಯನು ಕಲಿಯೆಂದು ಕನ್ನಡದ ಕಿರುಮರಿಗೆ
ಚಂದದಿಂ ನುಡಿವರಾ ಬುರುಡೆಗಳ ತಿರುಸಗೇ
ಗೊಂದಕೂ ಬಿಗಿಯಿಲ್ಲ, ಸರ್ವಜ್ಞ.

ಹತ್ತು ವಿಕೆಟ್ಟನಾಗಿ ಹಾಸ್ಸೇನು, ಎಂದರೆ
ಅಸ್ತು ನೀ ವೆರಿಟೆ ಎನಬೇಕು, ಮೂರ್ಖರಲಿ,
ಸ್ವಸ್ತಿಯೇ ಲೇಸು, ಸರ್ವಜ್ಞ.

ತ್ರೀ ಹಂಡ್ರೆಡೊಬ್ಬನೇ ಹೊಡೆದೇನು ಎಂದರೆ
ಓಹೋ, ನೀ ಬ್ರಾಡ್ಮನೆನಬೇಕು, ಧೂರ್ತರಿಗೆ
ಸಿಹಿಮಾತೆ ಘೋಷ, ಸರ್ವಜ್ಞ.

ಕಾಲೇಜ ಸೇರ್ದಾಗ ಹಾಲ್ಗೋಣ ಮೆದ್ದಂತೆ
ಕಾಲಿನಲಿ ಪೇಪರನು ಕೊಟ್ಟಾಗ ಬಲಗಾಲ
"ಹೀಲು" ಮುರಿದಂತೆ, ಸರ್ವಜ್ಞ.

ಕ್ರೈಟ ಜಾತಿಯು ಪದ್ಯ ಸೊಟ್ಟ ಮೋರೆಯು ಗದ್ಯ
ಪಿಟ್ಟಿನಾಸೆಯು ಗ್ರಂಥ, ಒಟ್ಟಿಗೇ ಬಿಕಸದ
ಬುಟ್ಟಿಗೇ ಬಿಸುಡು, ಸರ್ವಜ್ಞ.

ಕವಿಯ ಕಿವಿ

ಮೆತ್ತನೆಯ ಬುರುಡೆಯ ಎರಡು ಕಡೆಗಳಲ್ಲೂ ಆ ಕಿವಿಗಳು ಅಲ್ಲಾಡದೆ ಕೆಂಚಗೆ ನಿಂತಿತ್ತು. ಅವುಗಳನ್ನು ಕವಿಯ ಕಿವಿಗಳೆಂದು ಕೊಂಡಾಡುವವರು ಯಾರೂ ಇರಲಿಲ್ಲ. ಅವುಗಳ ಮೂಲಕ ಪ್ರಪಂಚದ ವಿಧವಿಧವಾದ ಶಬ್ದಜಾಲಗಳು ಒಳನುಗ್ಗಿ ಕೂಸಿನ ಮೆದುಳನ್ನು ಕಲಕಿ ಕವಡಿಸಿದುವು. "ಆ ಮಹಾ ಆಕಾರ ಕೆಂದಟವನಾಡಿ ಜೋ ಜೋ ಜೋ ಜೋ ಎಂದು ಜೋಗುಳುವ ಪಾಡಿ"ದಾಗ ಕವಿಶಿರದಲ್ಲಿ ಮೊದಲನೆಯ ಕಾವ್ಯವಾಗಿ ಮುದ್ರಿತವಾಯಿತು. "ಕಾಗೆ! ಬೋಳ್! ಹಿಡಿದುಕೊಂಡು ಹೋಗು ಈ ಮಗುವನ್ನ!" ಎಂದು ತಾಯಿ ಹೆದರಿಸಿದಾಗ, "ಆ ಕಾಗಿಯಾಕಾಗಿ" ಎಂದು ಮುಂತಾದ ಕವನ ಸರಣಿಯು ತಲೆದೋರಿತು. "ಎಮ್ಮೆ ತಮ್ಮಣ್ಣ", "ಡೊಂಕುಬಾಲದ ನಾಯಕರೆ", "ಎಲ್ಲಿರುವೆ ತಂದೆ", ಎಂಬ ಶಬ್ದಗಳು ಎಮ್ಮೆ ನಾಯಿ ಇರುವೆ ಮೊದಲಾದ ಪ್ರಾಣಿಗಳಿಗೂ ಕವಿಗೂ ಹೊಸ ನಂಟತನವನ್ನುಂಟುಮಾಡಿದುವು. ಎಲ್ಲಿಯೋ ದೂರದಲಿ ಯಾವುದೋ ಒಂದು ಪರಿಭ್ರಮಣದ ನಿಯಮಕ್ಕೆ ಸಿಕ್ಕಿಕೊಂಡು ತಿರುಗುತ್ತಿರುವ ಮಣ್ಣಿನ ಮುದ್ದೆಯನ್ನು "ಚಂದಕ್ಕಿ ಮಾಮ" ಎಂದು ಹಿರಿಯರು ತನಗಾಗಿ ಸಂಬೋಧಿಸಿ ಚಪ್ಪಾಳೆ ತಟ್ಟಿದಾಗ ಮಗುವಿನ ಮನಸ್ಸಿನಲ್ಲಿ ಮಹೋಪಮೆಗಳು ಉದಯಿಸಿದುವು. ಅಜ್ಜಿ ಹೇಳಿದ ಕಥೆಗಳನ್ನು ಕೇಳಿದಾಗ ಸರಸಿಗಿಂತ ನರಿಯೇ ವಾಸಿ ಎಂದೆನಿಸಿತು; ಅರಣ್ಯದಲ್ಲೊಂದು ಆಸ್ಥಾನವಿದೆಯೆಂದೂ ಅಲ್ಲಿ ಸಿಂಹವು ರಾಜನಾಗಿ ದರ್ಬಾರು ಮಾಡುತ್ತದೆ ಎಂದೂ ಅಜ್ಜನಿಂದ ಕೇಳಿ ತಿಳಿದುಕೊಂಡಿತು; ಆಲದ ಮರದ ಹೆಂಡತಿ ಬೇವಿನಮರ, ಗುಬ್ಬಚ್ಚಿ ತೊಟ್ಟಿಲು ತೂಗಿಕೊಂಡು ಸಂಸಾರ ಸಾಗಿಸುತ್ತದೆ, ಕಾಮನ ಬಿಲ್ಲು ದೇವತೆಗಳ ಮಕ್ಕಳ ಜಾರುಗುಪ್ಪೆ, ಎಂದೆಲ್ಲಿ ಅಜ್ಜಿಯೇ ಹೇಳಿದಮೇಲೆ ಸಂಬಡಿ ಹೇಗೆ? ಸರಿ. ಕವಿಯೂ ಕೂಡ ತುಳಸಿಗಿಡದ ಹತ್ತಿರ, ಜಾಡಿ ಹೇಳುವುದು, ತೆಂಗಿನಮರವನ್ನು ಊಟಕ್ಕೆ ಕರೆದು ಮರಳು ಬಡಿಸುವುದು, ಚಂದಕ್ಕಿ ಮಾಮನ ಮಕ್ಕಳನ್ನೆಲ್ಲಾ ಚುಕ್ಕಣ್ಣಾ, ಚುಕ್ಕಣ್ಣಾ ಎಂದು ಕರೆಯುವುದು, ಹೀಗೆ ತನ್ನ ಬಾಲ್ಯಾವಸ್ಥೆಯಲ್ಲಿ ಆಟವಾಡಿದ.

ಆರನೆಯ ವಯಸ್ಸಿನಲ್ಲೇ ಒಂದು ಕವನ ಬರೆದ. ಮಕ್ಕಳನ್ನು ಹಿಡಿದು ಚೀಲದಲ್ಲಿ ತುಂಬಿ ಹೆಗಲಮೇಲೆ ಹೇರಿಕೊಂಡು ಹೋಗುವ ರಾಕ್ಷಸ ಅಂತಾ ರೆಯಿಲ್ವೆ ಇಂಜಿನನ್ನು ಸಂಬೋಧಿಸಿ ಬರೆದ ಪದ್ಯ ಅದು. ಇದರಿಂದ ಅವನ ಖ್ಯಾತಿ ಎಲ್ಲೆಲ್ಲೂ ಹಬ್ಬಿತು. ಆ ಊರಿನ ಮಕ್ಕಳ ಕೂಟಕ್ಕೆ ಆತನೇ ಅಧ್ಯಕ್ಷನಾದ. ಕೊಕ್ಕರೆಯನ್ನು "ಕೆಂದಟದ ಸಕ್ಕರೆ" ಎಂದು ಹೊಗಳಿದ ಪದ್ಯವನ್ನಂತೂ ಹೆಡ್ಮೇಷ್ಟರು ಬಾಯಿತುಂಬ ಕೊಂಡಾಡಿದರು. "ಡೊಂಕುಬಾಲದ ಕಾಗದವೇ" ಎಂದು ಗಾಳಿಪಟವನ್ನುದ್ದೇಶಿಸಿ ಬರೆದ ಭಾವಗೀತೆಯನ್ನು ಕನ್ನಡ ಪಂಡಿತರೂ ಕೂಡ ಮೆಚ್ಚಿದರು. ಸರಿ! ಕವಿಯ

ಲೇಖಣಿಯ ಮೂಲಕ ಆತನ ಕಿವಿ ಕೇಳಿದುದೆಲ್ಲ ಪ್ರವಹಿಸಲು ಮೊದಲಾಯಿತು. ರವಿ ಕಾಣದ ಸವಿಯನ್ನೆಲ್ಲಾ ಕವಿ ಕಾಣಲು ಪ್ರಾರಂಭಿಸಿದ. ಸ್ಪ್ರಿಟ್ಸ್ ಪುಟ್ಟಪ್ಪ, ಅಭಿನವ ಪೋಪ, ಎಂದು ಮಹಾಜನಗಳು ಅವನನ್ನು ಹೊನ್ನಶೂಲಕ್ಕೇರಿಸಿದರು ಹೊಗಳಿ ಹೊಗಳಿ. ಲೋವರ್ ಸೆಕೆಂಡರಿಯಲ್ಲೇ ಮೂರು ಸಾರಿ ಸೋಲಾಯಿತು. ಆದರೂ ಮಕ್ಕಳ ಕೂಟಗಳ ಅಧ್ಯಕ್ಷ ಪದವಿಯಿಂದ ಅವುಗಳ ಪ್ರಾರಂಭೋತ್ಸವ ನಿರ್ವಾಹಕ ಪದವಿಗೇರಿದ. "ಹಲಸು ಗೂಸಿನ ಪಿಸುಮಾತುಗಳು" "ತತ್ತರಿಸುವ ಕತ್ತರಿ" "ಚಂದಕ್ಕಿ ಮಾವ ಅವಲಕ್ಕಿ ಕುಟ್ಟಿದ್ದು" "ಪಿಕಪೋಷಿತ ಕಾಕ" "ಕರಡೀ ವೃಕ್ಷದ ಕಿರೀಟ" ಎಂಬ ಸಾಹಿತ್ಯ ಸ್ಯಮಂತಕಗಳು ಹೊರಬಿದ್ದುವು. ಪ್ರತಿಯೊಂದು ಪದ್ಯದಲ್ಲೂ ಕವಿಯ ಎಳೆತನದಲ್ಲಿ ಕಿವಿಗೆ ಬಿದ್ದ ಕಟ್ಟು ಕಥೆಗಳ ಪ್ರಭಾವನೇ ಹೆಚ್ಚು — ಹಾರುವ ಬೆಟ್ಟ, ನಾರುವ ಸಿಡಿಲು, ಸಾರುವ ಹುತ್ತ, ಆನೆಯ ತತ್ತಿ, ಕುದುರೆಯ ಕೊಂಬು, ಬಾಲವಿಲ್ಲದ ನರಿ, ಬರೆಯಿಲ್ಲದ ಹುಲಿ !

ಹೀಗೆ ಕವಿಯ ಬರವಣಿಗೆಯಲ್ಲಿ ಅಸಂಬಂಧಗಳೇ ಹೆಚ್ಚಾದುವು. ಬರಬರುತ್ತಾ ನಡೆವಾಗ, ನುಡಿವಾಗ, ''ಎಲವೋ ! ಕೋಗಿಲೇ ! '' "ಬೆಕ್ಕೆ ! ಏಕೆ ಕಕ್ಕಾಬಿಕ್ಕಿಯಾಗಿರುವೆ'', "ತರುಮೃಗಾದಿಗಳಿರಾ ! ಚಂದಕ್ಕಿ ಮಾಮಾ ! " ಹೀಗೆ ಒರಲುತ್ತಾ, ಕವಿ ಹುಚ್ಚಾದನು. "ಎನಗೀರ್ವರುಂತೋಳ್'' ಎಂದು ಹೇಳುತ್ತಾ ಎಡಭುಜವನ್ನು ದುಶ್ಶಾಸನಾ ಎಂದೂ, ಬಲಭುಜವನ್ನು ಕರ್ಣಾ ಎಂದೂ ಸದಾ ಸಂಭೋಧಿಸಲು ತೊಡಗಿದನು.

ಈಗ ಕವಿ ಹುಚ್ಚಾಸ್ಪತ್ರೆಯಲ್ಲಿದಾನೆ....ವಾಚಕ ಮಹಾಶಯರೇ ! ಎಳೆತನದಲ್ಲಿ ಹಿರಿಯರು ಹೇಳುವ ಸುಳ್ಳು ಕಥೆಗಳನ್ನ ಬೆಳೆದಾಗ ತಿದ್ದಿಕೊಳ್ಳಬೇಕು ಪ್ರತ್ಯಕ್ಷವೇ ಪ್ರಮಾಣ ಅಂತ ನಂಬಿ ಕಿವಿಯಲ್ಲಿ ಬಿದ್ದದ್ದನ್ನ ಕಣ್ಣುಬಿಟ್ಟು ನೋಡಿ ತಿದ್ದಿಕೊಳ್ಳಬೇಕು.

ಇಲ್ಲದಿದ್ದರೆ ನಮ್ಮ ಕಾವ್ಯ ಕೀನ್ಯವಾಗುತ್ತದೆ.

ಸಣ್ಣ ಕತೆಗಳಿಗೆ ಸುಲಭ ಸೂಚನೆಗಳು

ಸಣ್ಣ ಕತೆಗಳನ್ನು ಬರೆಯುವುದು ಪ್ರತಿ ಒಬ್ಬ ಮನುಷ್ಯನಿಗೂ ಒಮ್ಮೆಯಾದರೂ ಬರುವ ಜಾಡ್ಯ. ನಮ್ಮ ದೇಶದಲ್ಲಿ ಇತ್ತೀಚೆಗೆ ಇದು ಸಾಂಕ್ರಾಮಿಕ ಜಾಡ್ಯವಾಗಿ ಪರಿಣಮಿಸಿದೆ. ಅಲ್ಲದೆ ಉತ್ಕಟಾವಸ್ಥೆಗೂ ಬಂದಿದೆ. ಆದರೂ ಅಂತಹವರಿಗೆ ಸುಲಭ ಚಿಕಿತ್ಸೆಗಳು ದೊರೆಯುವುದು ಅಪರೂಪ. ಈ ಲೇಖನಗಳು ಸುಲಭ ಚಿಕಿತ್ಸೆಗಳು.

ಚಿಕ್ಕ ಹುಡುಗರು ಆಟ ಊಟ ಓಟಗಳನ್ನು ಕಲಿತ ಮೇಲೆ, ಅಥವಾ ಕಲಿಯುವ ವೇಳೆಗೆ ಕತೆಗಳನ್ನು ಕೇಳಲಾರಂಭಿಸುತ್ತಾರೆ. ಮನೆಯಲ್ಲಿ ಅಜ್ಜಿಯರು ತಾಯ್ತಂದೆಗಳು ಎಲ್ಲರೂ ದೇವರ ಕತೆಗಳನ್ನು ಹೇಳುತ್ತಾರೆ. ರಾಮಾಯಣ ಮಹಾಭಾರತ ಇತ್ಯಾದಿಯ ಕತೆಗಳನ್ನು ಹೇಳುತ್ತಾರೆ. ಇವಲ್ಲೆಲ್ಲಾ ಮುಖ್ಯಪಾತ್ರ ಹೆಂಗಸಿನದು. ರಾಮನ ಹೆಂಡತಿಯನ್ನು ರಾವಣ ಕದ್ದುಕೊಂಡು ಹೋದ. ಉತ್ತರ-ರಾಮಾಯಣ. ದ್ರೌಪದಿಯನ್ನು ಐದು ಜನರು ಮದುವೆಯಾದ ಮೇಲೂ ಕೌರವನು ಅಪೇಕ್ಷಿಸಿದ. ಮಹಾಭಾರತವಾಯ್ತು. ಶ್ರೀ ಕೃಷ್ಣಪರಮಾತ್ಮನ ವಿಚಾರ ಹೇಳಬೇಕೇ? ಇವೆಲ್ಲದರಲ್ಲೂ ಒಂದು ಸಂಗತಿ ತೋರಬರುವುದು. ಪ್ರಣಯ. ಈ ಪ್ರಣಯವು ಆದಿ ಗುಣ ಅಂದ ಮೇಲೆ ಸಣ್ಣ ಕತೆಗಳಲ್ಲಿ ಪ್ರಣಯದ ಕತೆಯು ರತ್ನಪ್ರಾಯ, ಹಾಗಾಗಿ ಪ್ರಣಯದ ಕತೆಯ ವಿಚಾರವನ್ನು ಮೊದಲು ಬರೆಯುತ್ತೇವೆ.

ಈ ಪ್ರಣಯದ ಕತೆಗೆ ಬೇಕಾದ ಹಲವು ಸಲಕರಣೆಗಳಿವೆ.

(ಅ) ಕಥಾನಾಯಕ. ಹುಡುಗನಾಗಿರಬೇಕು. ರೂಪ ಮುಖ್ಯವಲ್ಲ. ವಯಸ್ಸು ಮುಖ್ಯ. ಹುಡುಗನಾಗಿರಬೇಕು, ಇಲ್ಲವೆ ೫೦ ವರ್ಷದ ಮುದುಕನಾಗಿರಬೇಕು. ಹಣವಂತನಾದರೆ ಪರವಾಗಿಲ್ಲ. ಬಡವನಾದರೆ ಚೆನ್ನ.

(ಆ) ಕಥಾನಾಯಕಿ. ಹುಡುಗಿ. ಇವಳಿಗೆ ರೂಪು ಮುಖ್ಯ. ಸ್ಫುರದ್ರೂಪಿಯಾಗಿರಬೇಕು. ದಿಳ್ಳಿಯವಳಾದರೂ ಚೆನ್ನ. ಹಳ್ಳಿಯವಳಾದರೆ ಇನ್ನೂ ಚೆನ್ನ. ಆತಂಕಗಳಿದ್ದರೆ ಇವಳಿಗೆ ಕಳೆಕಟ್ಟುತ್ತದೆ. ಉದಾ. ತಂದೆ, ಗಂಡ, ಮಕ್ಕಳು.

(ಇ) ಸನ್ನಿವೇಶ. ಕಥೆಯಲ್ಲಿ ಸನ್ನಿವೇಶವು ಪ್ರಾಮುಖ್ಯ. ವನಗಳು, ಬೆಳದಿಂಗಳು, ಸಂಗೀತ ಕಛೇರಿ, ಸಿನೀಮಾ. ಇತ್ತೀಚೆಗೆ ವಿದ್ಯಾಲಯಗಳು. ಇವುಗಳಲ್ಲಿ ಎರಡು ಮೂರಾದರೂ ಇರಲೇ ಬೇಕು

(ಈ) ಮಾತುಗಳು— ಇವು ಬಹು ಮುಖ್ಯವಾದುದು. ಕಥಾನಾಯಕ ನಾಯಕಿಯರ ದರ್ಜೆಗೆ ತಕ್ಕಂತೆ ಮಾತುಗಳು ಇರಬೇಕು. ಎನ್ನ ರನ್ನೆ, ಬಾಲೇಂದು ಫಾಲೆ, ಕೆಂದುಟಿಯ ಕಾಮಿನಿ,— ರನ್ನ, ಪ್ರಿಯಜನಕನೇ, ಪ್ರಾಣಲಿಂಗ, ಇತ್ಯಾದಿ.

(ಉ) ಕೆಲವು ಚರ್ಯೆಗಳು. ಪ್ರಣಯದ ಕತೆಯಲ್ಲಿ ಈ ಚರ್ಯೆಗಳನ್ನು ಯಥೇಚ್ಛವಾಗಿ ಉಪಯೋಗಿಸಬೇಕು. ಇವುಗಳಿಂದಲೇ ಪ್ರಣಯದ ವಾತಾವರಣವು

ಬೆಳೆದು ಬರುವುದು. ಉದಾಹರಣೆಗೆ ನಿಟ್ಟುಸಿರು, ಚಿಂತಾಕ್ರಾಂತ, ಉಂಗಷ್ಟದಿಂದ ನೆಲವನ್ನು ಕೆದರುವುದು, ಬೆರಳುಗಳಿಂದ ಮೇಜಿನ ಮೇಲೆ ತಬಲವಾಡುವುದು, ಕಣ್ಣಂಚಿನ ನೋಟ, ಬಳುಕುವ ಚಲನ ವಲನ, ಹೋಗುತ ಹೋಗುತ ಹಿಂದಿರುಗಿ ನೋಡುವುದು—ಕೆಳದುಟಿಯನ್ನು ಕಚ್ಚುವುದು, ಮೆಲ್ಲಗೆ ಶೀಟಿಹಾಕುವುದು. ಇತ್ಯಾದಿ.

ಈ ಸಲಕರಣೆಗಳನ್ನೆಲ್ಲಾ ಸಿದ್ಧಮಾಡಿಕೊಂಡ ಮೇಲೆ ಪ್ರಣಯದ ಕತೆಯನ್ನು ಬರೆಯುವುದು ಬಲು ಸುಲಭ — ಸುಲಿದ ಬಾಳೆಯ ಹಣ್ಣಿನಂದದಿ—ಅಭ್ಯಾಸ ಕ್ಕೋಸ್ಕರ ಒಂದು ಪ್ರಣಯದ ಕತೆಯನ್ನು ಬರೆಯೋಣ.

ಒಂದು ಊರು. ಊರಿನಲ್ಲಿ ಒಂದು ವನ. ಸಂಧ್ಯಾಕಾಲ. ಆಗಲೇ ಆಕಾಶ ದಲ್ಲಿ ಚಂದ್ರಮನು ಇಣಿಕಿಣಿಕಿ ನೋಡುತ್ತಿದ್ದಾನೆ. ನಮ್ಮ ಕಥಾನಾಯಕನನ್ನು ವನದಲ್ಲಿ. ಕಥಾನಾಯಕನು ಹೆಸರು. ಅಜಿತ ಕುಮಾರ. ಕನ್ನಡದ ಕತೆಯಾದ್ದರಿಂದ ಉತ್ತರ ದೇಶದ ಹೆಸರು, ಚೆನ್ನು. ಅಜಿತ ಕುಮಾರನು ವನದಲ್ಲಿ ಅಡ್ಡಾಡುತ್ತಾ ನಿಟ್ಟುಸಿರು ಬಿಡುತ್ತಿರುವನು. ಅವನ ಪ್ರೇಯಸಿ—ಅನೇಕಾರಣದಿಂದ ಅವಳ ಹೆಸರು ಅಮರಜಿತ ಕುಮಾರಿ—ವನಕ್ಕೆ ಆರು ಗಂಟೆಗೆ ಬರುವುದಾಗಿಯೂ, ತಾನೊಬ್ಬಳೇ ಬರುವುದಾಗಿಯೂ ಇವನೊಡನೆ ಕೆಲಕಾಲ ಉಲ್ಲಾಸಮಾಡುವುದಾಗಿಯೂ ಸೂಚನೆ ಯನ್ನು ವಿದ್ಯಾಲಯದಲ್ಲಿ ಮಧ್ಯಾಹ್ನ ಕೊಟ್ಟಿದ್ದಳು. ಆರುಮುಕ್ಕಾಲು ಗಂಟೆ ಯಾದರೂ ಇನ್ನೂ ಬಂದಿರಲಿಲ್ಲ. ಅದಕ್ಕಾಗಿಯೇ ಅಜಿತ ಕುಮಾರನು ನಿಟ್ಟುಸಿರು ಬಿಡುತ್ತಾ ಶತಪಥನಡೆಯುತ್ತಿರುವನು. ಈ ಸಮಯದಲ್ಲಿ ಪ್ರಕೃತಿಯು ವಾತಾವರಣ ವನ್ನು ರಂಗು ಗೊಳಿಸುತ್ತಾಳೆ. ಅಜಿತನ ವಿರಹವನ್ನು ನೋಡಿ ಸುತ್ತಲೂ ಇರುವ ಮುದಿ ಮರಗಳು ಕೂಡ ಸುಯ್ಯೆಂದು ದನಿಗೈಯ್ಯುವುವು. ಹತ್ತಿರದಲ್ಲಿರುವ ಕೆರೆಯಲ್ಲಿ ಕಪ್ಪೆಗಳು ಕೂಡ ಹೊಡೆದುಕೊಳ್ಳುವುವು. ಕೊನೆಗೆ ಆಕಾಶದಲ್ಲಿರುವ ಚಂದ್ರನು ಕೂಡ ಈ ಕಷ್ಟವನ್ನು ನೋಡಿ ತಾಳಲಾರದೆ ಅರ್ಧ ಬೆಂದುಹೋಗುವನು.

ಆ ವೇಳೆಗೆ ದೂರದಲ್ಲಿ ಒಂದು ಗಾಡಿಯ ಶಬ್ದವಾಗುವುದು. ಅಜಿತನು ಅವಾಕ್ಕಾಗಿ ನಿಂತನು. ತನ್ನ ಪ್ರೇಯಸಿಯ ಗಾಡಿಯೇ—ಅಲ್ಲ, ಅಷ್ಟು ಅದೃಷ್ಟಶಾಲಿ ಯಲ್ಲ— ಗಾಡಿಯು ಇನ್ನೂ ಹತ್ತಿರ ಬಂತು. ಹೌದು—ತನ್ನರಸಿಯ ಗಾಡಿಯೇ ಹೌದು, ಆಹಾ, ಅವಳೇ ಇಳಿಯುತ್ತಿರುವಳು. ಜತೆಯಲ್ಲೇನು, ಅವಳ ನಾಯಿ. ಅಬ್ಬಾ! ಇದೇನಿದು. ಕರುವಿನಂತೆ ಬೆಳೆದಿದೆ ಈ ನಾಯಿ.

ಅಜಿತನಿಗೆ ನಾಯಿಗಳನ್ನು ಕಂಡರೆ ಪರಮ ಭೀತಿ. ಚರಮ ಗೀತವನ್ನು ಕೇಳಿ ದಂತಾಗುತ್ತಿತ್ತು. ಪ್ರೇಯಸಿಯ ಜತೆಯಲ್ಲಿ ಅವಳ ತಂದೆಯು ಬಂದಿದ್ದರೂ ಹೆದರುತ್ತಿರಲಿಲ್ಲ. ಆದರೇನು ಮಾಡಿಯಾನು. ಇದು ಬಿದಿಯ ನೀತಿ. ಪ್ರೇಮದ ಹಾದಿಯು ನಾಯಿಗಳಿಂದ ತುಂಬಿದ್ದುದನ್ನು ಅಜಿತನು ಈಗ ಅರಿತ. ನಾಯಿಗೆ ಹೆದರಿದರೆ ಕನ್ನೆಯು ಮೆಚ್ಚುವಳೇ— ಮನಸ್ಸು ಧೈರ್ಯ ಮಾಡಿಕೊಂಡು ಅವ

ದಾರಿ ತೋರೆದು, ವೀರಾಗ್ರಣಿಯಂತೆ ಅಮರಜಿತಳನ್ನು ಮಾತನಾಡಿಸಲು, ಸ್ವಾಗತಿಸಲು ಹೊರಟನು.

"ಎನ್ನ ಮನದ ರತಿಯೇ—ಕಡೆಗೂ ಬಂದೆಯಾ"

"ಅಜಿತಾ, ನನಗಾಗಿ ಬಹಳವಾಗಿ ಕೊರಗಿದೆಯಾ ಹೊರಡುವ ವೇಳೆಯಲ್ಲಿ ನನ್ನ ಸ್ನೇಹಿತಳು ಬಂದಳು ಆಕೆಯನ್ನು ತಪ್ಪಿಸಿಕೊಂಡು ಬರಲು ವಿಳಂಬವಾಯ್ತು."

"ಎನ್ನ ರನ್ನೆ. ಏನು ಚತುರತೆ, ರೂಪಿಗೆ ತಕ್ಕಂತೆ ಚಮತ್ಕಾರ. ಬಾ, ಕೊಳದ ತಡಿಯ ಮೆಟ್ಟಲುಗಳ ಮೇಲೆ ಕುಳಿತು ಸಂಧ್ಯಾರಾಗವನ್ನು ಅನುಭವಿಸೋಣ."

"ಸರಿಯಾದ ಮಾತಂದೆ, ಬಾ ಅಲ್ಲಿಗೆ ಹೋಗೋಣ"

ಇಬ್ಬರೂ ಹತ್ತಿರಿದ್ದ ಕೊಳದ ಬಳಿಗೆ ಹೋಗಿ ಅಲ್ಲಿನ ಮೆಟ್ಟಲುಗಳ ಮೇಲೆ ಕುಳಿತುಕೊಳ್ಳುವರು. ಹಿಂದೆಯೇ ಅಮರಜಿತಳ ನಾಯಿಯು ಬಂದು, ಅದೂ ಅಲ್ಲಿಯೇ ಕುಳಿತುಕೊಳ್ಳುವುದು. ಈ ವೇಳೆಗೆ ಮರಗಳ ಶಬ್ದವೂ ನಿಂತುಹೋಗಿರುವುದು. ಚಂದ್ರನು ಇದನ್ನು ನೋಡಲಾರದೆ ಮೋಡಗಳ ಹಿಂದೆ ಮರೆಯಾಗುವನು.

ಈ ವೇಳೆಗೆ ಕತೆ ಕೇಳುವವರಿಗೆ ಬೇಸರ—ಹೇಳುವವನಿಗೆ ಇನ್ನೂ ಬೇಸರ. ಬೇಗ ಕತೆಯು ಮುಗಿಯದಿದ್ದರೆ, ಕತೆಗಾರನನ್ನು ಕೇಳುತ್ತಿದ್ದವರು ಮುಗಿಸುವರು. ಅಂದಮೇಲೆ ಕತೆಯನ್ನು ಕೂಡಲೇ ಮುಗಿಸಬೇಕು. ಪ್ರೇಮದ ಹಾದಿಯು ಕುನಕಪೀಡಿತ, ನೇರವಾದುದಲ್ಲ. ಅಂದರೆ ಕತೆಯಲ್ಲಿ ಪ್ರಣಯದ ಸಾಕ್ಷಾತ್ಕಾರವಾಗಬಾರದು. ಹಾಗಾಗಿ ಇವರಿಗೆ ವಿಪತ್ತು ಬರಲೇಬೇಕು. ಆಕಸ್ಮಿತವಾಗಿ ಅಮರಜಿತಳ ತಂದೆಯು ತನ್ನ ರಬ್ಬರ ಚಾವಟಿಯಿಂದೊಡಗೂಡಿ ಬಂದರೂ ಆಯಿತು. ಇಲ್ಲವೇ ನಾಯಿಯು ರೇಗಿದರೂ ಆಯಿತು, ಅಥವಾ ಇನ್ನುಮುಂದೆ ನಾವು ಮುಗಿಸುವಂತೆ ಮುಗಿಸಿದರೂ ಆಯಿತು.

ಇಬ್ಬರೂ ಲಲ್ಲೆಯಾಡುತ್ತಿದ್ದರು. ದೂರದಲ್ಲಿ ಒಂದು ಬೆಕ್ಕು ಸುಳಿದಾಡಿದಂತೆ ಆಯಿತು. ನಾಯಿಯು ಹಠಾತ್ತಾಗಿ ಎದ್ದು ಘಟ್ಟಿಯಾಗಿ ಬೊಗಳುತ್ತಾ ಆ ಬೆಕ್ಕನ್ನು ಅಟ್ಟಿಸಿಕೊಂಡು ಹಿಡಿತು. ಆ ಬೊಗಳಿಕೆಗೆ ಬೆದರಿದ ಅಜಿತನು ಒಮ್ಮೆಲೇ ಎದ್ದುನಿಂತನು, ಕಾಲು ಜಾರಿದನು, ಕೊಳಕ್ಕೆ ಬಿದ್ದನು, ಬಿದ್ದವನು ತಿರುಗಿ ಏಳಲೇ ಇಲ್ಲ. 'ಅಯ್ಯೊ ನನ್ನ ಕನ್ಮಣಿಯೇ, ನನ್ನ ಪುಸ್ತಕ ಭಾಂಡಾರದ ಪುಸ್ತಕವನ್ನು ತೆಗೆದುಕೊಂಡು ಹೋದೆಯಲ್ಲಾ' ಎಂದು ಅರಚುತ್ತ ಅಮರಜಿತಳು ಕೊಳಕ್ಕೆ ಬೀಳುವಳು. ಅವಳೂ ತಿರುಗಿ ಮೇಲಕ್ಕೆ ಬರಲೇ ಇಲ್ಲ. ನಾಯಿಯು ಹಿಂತಿರುಗಿ ಇವರಿಬ್ಬರೂ ಇಲ್ಲದುದನ್ನು ಕಂಡು ತನ್ನ ಮನೆಗೆ ತಾನು ಹೋಯಿತು.

ಹೀಗೆ ಮುಕ್ತಾಯ ಮಾಡುವುದರಲ್ಲಿ ಒಂದು ಅನುಕೂಲ, ತಿರುಗಿ ಅಜಿತ ಅಮರಜಿತರು ಎದ್ದು ಬಂದು ನಮ್ಮನ್ನು ಕಾಡುವುದಿಲ್ಲ—ಅವರುಗಳು ನರಕದಲ್ಲಿ ತಪ್ಪು ಸಾಧಿಗೆ ತಾವು ಸುಖವಾಗಿರುವರು.

ಇವೆಲ್ಲವೂ ಆದ ಮೇಲೆ—ಅಥವಾ ಆರಂಭಿಸುವ ಮುನ್ನ ಕತೆಯ ಹೆಸರು ಸಿದ್ಧಾಂತವಾಗ ಬೇಕು. ಹೆಸರಿನಿಂದ ಕತೆಯ ನಿಸ್ಸಾರತ್ವವು ಕಾಣಬಾರದು, ಪ್ರೌಢ ತರವಾದ ಅರ್ಥವುಳ್ಳದ್ದಾಗಿರಬೇಕು— ನಮ್ಮ ಅಭ್ಯಾಸಿಕ ಕತೆಗೆ “ಕೊಳದ ಕಟ್ಟೆ” “ವನದಲ್ಲಿ ಸಂಧ್ಯಾಕಾಲ”— “ನಾಯಿಯ ಬೊಗಳು” ಹೀಗೆ ಏನಾದರೂ ಹೆಸರಿಡ ಬೇಕು.

ಮುಂದಿನಸಾರಿ ಪತ್ತೇದಾರಿ ಕತೆಯ ಸ್ಥೂಲರಚನೆಯನ್ನು ಬರೆಯುತ್ತೇವೆ. ಈ ಪಾಠವು ಮಂದಟ್ಟಾಗಿದ್ದರೆ ಅದನ್ನೂ ಓದಿಕೊಳ್ಳಿ.

ಕಪಿಗಳು ಸಹಾ ಈಚೆಗೆ ಪತ್ರಿಕೆಗಳಲ್ಲಿ ಲೇಖನಗಳನ್ನೂ ಬರೆಯುತ್ತವೆ ಎಂದು ಉತ್ತರ ಹಿಂದೂಸ್ಥಾನದ ಪತ್ರಿಕೆಯೊಂದು ತಿಳಿಸುತ್ತದೆ.

ಹೌದು. ಆ ಪತ್ರಿಕೆಯಲ್ಲಿನ ಪ್ರಧಾನ ಲೇಖನಗಳನ್ನು ನಾವೂ ಓದಿದ್ದೇವೆ.

* *

ಲಲಿತೆಯು ಬಲು ಚೂಟಿಯ ಹುಡುಗಿ. ವಯಸ್ಸು ನಾಲ್ಕು. ಅವಳು ಹೇಳಿದ ಉತ್ತರ ರಾಮ ಚರಿತ್ರೆಯನ್ನು ಕೇಳಿ

ಸೀತಾದೇವಿಗೆ ಅವಳಿ ಮಕ್ಕಳಾದುವು – ಲವ ಕುಶ ಎಂಬುವು. ರಾಮನಿಗೆ ಬೇಜಾರಾಗಿ ಸೀತೆಯನ್ನೂ ಮಕ್ಕಳನ್ನೂ ಕಾಡಿಗೆ ಕಳುಹಿಸಿದನು.

* *

‘ಯುಗಾದಿಗ ಉಗುಳು ನೀರು’ ಎಂಬ ನಾಟ್ಯವು ಪ್ರಸಿದ್ಧವಾದುದು.

ಈಗಿನ ಸನ್ನಿವೇಶದಲ್ಲಿ ಯಾರು ಯಾರಿಗೆ ‘ಉಗುಳು ನೀರೋ’ ಗೊತ್ತಿಲ್ಲ.

* *

ನಮ್ಮೂರಿನ ರಸ್ತೆಗಳ ಹೆಸರನ್ನು ಬದಲಾಯಿಸಬೇಕೆಂಬ ಸಲಹೆ ಬಂದಿದೆ.

ಹೆಸರನ್ನು ಬದಲಾಯಿಸುವ ಬದಲು ರಸ್ತೆಗಳನ್ನು ಬದಲಾಯಿಸಬಾರದೇ ?

* *

ನಮ್ಮೂರಿನ ಅನಾಥಾಲಯದಲ್ಲಿ “ಎಲ್ಲಿರುವೆ ತಂದೆ ಬಾರೋ” ಎಂಬ ಕೀರ್ತನೆಯನ್ನು ದಿನಾಲೂ ಹಾಡುತ್ತಾರೆಂದು ಶ್ರೀ ಗುಂಡೂ ಅವರು ತಿಳಿಸಿದ್ದುದು ಸುಳ್ಳೆಂದು ನಮಗೆ ತಿಳಿದುಬಂದಿದೆ.

* *

ಅಂತರರಾಷ್ಟ್ರೀಯ ಸೌಹಾರ್ದತೆಯು ತಕ್ಕಮಟ್ಟಿಗೆ ಆರಂಭಿಸಿದೆಯೆಂದು ನಮ್ಮ ಬಾತ್ಮೀದಾರರು ತಿಳಿಸುತ್ತಾರೆ.

ಹೌದು, ಕಾಮನ ಹಬ್ಬವನ್ನು ಬಹಳ ಜನಾಂಗದವರು ಈ ಸಾರಿ ಆಚರಿಸಿ ದರೆಂದು ನಾವೂ ಕೇಳಿದೆವು.


ಮರಮಾತು

ಸಾಲುಮರಗಳ ಪಾಡು ಯಾರಿಗೂ ಬೇಡ, ತೋಪುಗಳಲ್ಲಾದರೆ ಹಸುರು ಪಾಣಿ ಚಪ್ಪರದ ಕೆಳಗೆ ತಂಪಾಗಿ ನಿಂತು ಗುಂಪಾಗಿ ಕಾಡುಹರಟೆ ಹೊಡೆಯಬಹುದು. ಆದರೆ, ಅಗಲವಾದ ರಸ್ತೆಯ ಎರಡು ಕಡೆಗಳಲ್ಲೂ ಒಂದರಕೊಂಬೆ ಮತ್ತೊಂದಕ್ಕೆ ತಗುಲದೆ ದೂರದೂರ ನೆಟ್ಟಗೆ ಸಿಪಾಯಿಗಳ ಹಾಗೆ ನಿಲ್ಲಿಸಿದರೆ ಆ ಮರಗಳು, ಪಾಪ, ಏನು ಸುಖ ಕಂಡಾವು? ತಮ್ಮ ಮುಂದೆ ಹರಿದುಹೋಗುವ ಮಾನವ ಕೀಟಗಳನ್ನೂ, ಕಾಲಸ್ಥಿತಿಯನ್ನು ಮತ್ತಷ್ಟು ಕೆಡಿಸಿಕೊಳ್ಳಲು ಅವು ಅಳವಡಿಸಿಕೊಂಡಿರುವ ವಾಹನ ವಿಶೇಷಗಳನ್ನೂ ಎಷ್ಟುಹೊತ್ತು ತಾನೆ ಅವು ನೋಡುತ್ತಾ ನಿಂತಾವು? ಆದರೆ, ಹಸುರನ್ನೇ ಕೆಸರಾಗಿಸುವ ಧೂಳು ಬೇರೆ. ಕತ್ತಲಾಗುತ್ತಲೂ ಕಣ್ಣಿಗೆ ನಿದ್ದೆ ಹತ್ತುವುದೇ ಕಷ್ಟ.

ಈ ಹೊತ್ತು ರಾತ್ರಿ ನಮ್ಮೂರು ದೊಡ್ಡಬೀದಿ ಸಾಲುಮರಗಳಿಗೆಲ್ಲ ಸಡಗರವೋ ಸಡಗರ! ಮಧ್ಯಾಹ್ನವೇ ಯಾರೋ ಮುನಿಸಿಪಾಲಿಟಿಯವರು ಬಂದು ಅವುಗಳಿಗೆಲ್ಲಾ ಅಂಗೈಯಗಲ ಅಂಗಾರ ಹಚ್ಚಿ ಹೊರಟುಹೋದರಂತೆ. "ಏನು ಬಂತಪ್ಪಾ! ಪರಮಾತ್ಮಾ" ಅಂತ ಅವುಗಳಿಗೆ ಕಳವಳ! ಕ್ಷೌರವಿಲ್ಲ! ಸ್ನಾನವಿಲ್ಲ! ಹಣೆಗೆ ಮಾತ್ರ ಟಾರಿನ ಬೊಟ್ಟು! ಏಕೆ ಎಂಬುದು ಬಗೆ ಹರಿಯಲಿಲ್ಲ.

ಮರುದಿನ ಬೆಳಗ್ಗೆ ನಿಜಸ್ಥಿತಿ ಏನೆಂದು ಮರಗಳಿಗೆ ತಿಳಿಯಿತು. ಅಂಗಾರದ ಒಳತಂತ್ರ ತಿಳಿಯಿತು. ಆಗ ಕಪ್ಪನೆಯ ಟಾರಿನ ಮೇಲೆ ಬಿಳಿ ಬಣ್ಣದ ನಂಬರುಗಳನ್ನು ಬಳಿದರು, "ಯಾಕೆ? ನಾವೇನು ಓಡಿಹೋಗುತ್ತೇವೆಯೇ?" "ನಾವೇನು ಪೋಲೀಸಿನವರೇ?" "ನಾವೇನು ಪೋಸ್ಟ್‌ಮ್ಯಾನುಗಳೇ?" "ನಮಗೊಂದು ಹಾಜರಿ ರಿಜಿಸ್ಟರಿಡುತ್ತಾರೆಯೇ?" ಎಂದು ಮುಂತಾಗಿ ಕೆಲವು ಬಿಸಿಹಸುರಿನ ತರುಣಮರಗಳು ಕುತರ್ಕ ಮಾಡಿದುವು. ಬೇವು, ಮಾವು, ಹಲಸು ಅಂತ ದೇವರು ಕೊಟ್ಟ ಹೆಸರುಗಳಿರುವಾಗ ಈಗ ನಿರ್ನಾಮವಾಗಿ ಅಂಕಿ ಹಾಕಿಕೊಂಡು ನಾಚಿಕೆಯಿಲ್ಲದೆ ಬೀದಿಯಲ್ಲಿ ನಿಂತಿರಬೇಕಲ್ಲಾ ಅಂತ ಕೆಲವು ಹಿರಿಯ ಮರಗಳು ಕೊರಗಿದುವು. "ಒಂದನೆಯ ನಂಬರು, ಯಾರು ಗೊತ್ತೆ, ನಾನು!" ಅಂತ ಯಾವುದೋ ಕೆಲಸಕ್ಕೆ ಬಾರದ ಪರದೇಶಿಮರ ಹೆಮ್ಮೆ ಪಟ್ಟಾಗ ಎರಡನೆಯ ನಂಬರಾದ ತಿಂತ್ರಿಣೀ ವೃಕ್ಷವು ಅದರ ತಲೆಯಮೇಲೆ ಒಂದು ಏಟು ಹಾಕಿತು. ಆಗ ಹತ್ತಿರದ ಮರಗಳೆಲ್ಲವೂ ಕೈ ಬೀಸಿ ನಕ್ಕುವು. ಎಲ್ಲಾ ಬಿಟ್ಟು ತನ್ನನ್ನ ಏಳು ಅಂದರಲ್ಲಾ ಎಂದು ಆಲದ ಮರ ಕೋಪಿಸಿಕೊಂಡು ಅಲ್ಲಾಡದೆ ನಿಂತಿತ್ತು. ಬಿಲ್ಪತ್ರೆಮರ ಒಂದಕ್ಕೆ ೧೧೧ನೆಯ ನಂಬರು ಬಳಿದರು ಅಂತ ಕೇಳಿದಾಗ ಆಲದ ಮರಕ್ಕೂ ಕೊಂಚ ಗಾಳಿ ಬೀಸಿದಂತಾಯಿತು! ಅನೀಮಿಯದಿಂದ ಸೊರಗಿಹೋಗಿದ್ದ ಒಂದು ಮಹಾಗನಿ ಮರಕ್ಕೆ, "ನಂಬರನ್ನುಳಿಸುವುದಕ್ಕಾದರೂ ನನಗಿನ್ನು ಗಂಗೋದಕ ಹಾಕಿಸುತ್ತಾರೆ" ಎಂಬ ಸಮಾಧಾನ. ಸಾಕ್ಷರತಾ ಪ್ರಚಾರ ಶಾಲೆಯ ಎದುರಿಗಿದ್ದ ಹೊಂಗೆಮರ,

"ಓಹೋ! ನಂಬರು ಬೀಳದದ್ದು ಏಕೆ ಅಂತ ನನಗೆ ತಿಳಿಯಿತು. ಮನುಷ್ಯನ ಕಣ್ಣಿಗೆ ಅಂಕಿಗಳು ಬಿದ್ದಷ್ಟೂ ಒಳ್ಳೆಯದು; ಅವನಿಗೆ ಅವುಗಳ ಸ್ವರೂಪ ತಿಳಿಯುತ್ತದೆ, ಇದು ಇಂಜಿನೀಯರುಗಳ ತಂತ್ರ" ಎಂದು ಸಾರಿತು. ಸಮಮರಗಳನ್ನೇ



ಕೋಲಿಂದ ಹೊಡೆಯುತ್ತಾ 'ವಾಕಿಂಗ್' ಹೋಗುತ್ತಿದ್ದ ಒಬ್ಬ ಮುದುಕನ ಕಾಟ ತಪ್ಪಿತಲ್ಲಾ ಅಂತ ಬೆಸಮರಗಳು ಹಿಗ್ಗಿದುವು.

ನೂರನೆಯ ನಂಬರು ಮರಕ್ಕೆ ಎಂದೂ ಇಲ್ಲದ ಜಂಬ. ಏಕೆಂದರೆ, ಒಬ್ಬ ತರುಣನು ತನ್ನ 'ಇನಿಯಳಿಗೆ, ನಾಳೆ ಇದೇ ಹೊತ್ತಿನಲ್ಲಿ ಇಲ್ಲೇ ಸೇರೋಣ' ಎಂದು ಉಸುರಿದಾಗ, ಆಕೆ, ಬಾಗಿ ಬಳುಕಿ ಒಲವು ತುಂಬಿ ತುಳುಕುತ್ತಿದ್ದ ತನ್ನ ಚಂಚಲ ನೇತ್ರಗಳಿಂದ ಒಪ್ಪಿಗೆಯಿತ್ತು, "ಆಗಲಿ! ಈ ನೂರನೆಯ ನಂಬರು ಮರದ ಹತ್ತಿರ ನಿಂತಿರುತ್ತೇನೆ" ಎಂದಳಂತೆ. ಇದನ್ನು ಕೇಳಿ ಸಾಲು ಮರಗಳೆಲ್ಲವೂ ಮರ್ಮರ ನಿನಾದ ಮಾಡಿದುವು.

—ಸುರನೇ ನಾಯಕ್

ವಾಸುವಿನ ವ್ಯಕ್ತಿತ್ವ

ನಮ್ಮೂರಿನಲ್ಲಿ ನಾಡ ಹಬ್ಬದ ಸಂಭ್ರಮವೇ ಸಂಭ್ರಮ. ಒಂದೊಂದು ವರ್ಷವೂ ಒಂದೊಂದು ಚಾತುರ್ಯವು ನಡೆವು, ಆ ವರ್ಷದ ನೆನಪು ಅಚ್ಚಳಿಯದಂತೆ ನಿಲ್ಲುವುದು. ಹೋದವರುಷ ಅಂತಹುದೊಂದು ಪ್ರಸಂಗ ನಡೆಯಿತು. ಅದನ್ನೇ ಹೇಳ ಹೊರಟಿದ್ದೆ.

ನಾಡ ಹಬ್ಬದ ವನಭೋಜನ. ಊರ ಹಿರಿಯರು ಕಿರಿಯರು, ಸಾಹಿತ್ಯದಲ್ಲಿ ಅಭಿಲಾಷೆ ಇದ್ದವರೂ, ಇರಬೇಕಾದವರೂ, ಅದರಿಂದ ಜೀವನ ನಡೆಸುತ್ತಿದ್ದವರೂ, ಜೀವ ಬಿಡಿಸುತ್ತಿದ್ದವರೂ ಸರ್ವರೂ ಮಧ್ಯಾಹ್ನ ಪುಷ್ಕಳವಾಗಿ ಊಟಮಾಡಿ ವೀಳೆಯವನ್ನು ಮೆಲ್ಲಲೋಸುಗ ಸಮೀಪದಲ್ಲಿದ್ದ ಬಸವನ ಮಂಟಪದಲ್ಲಿ ಕೂಡಿದ್ದರು. ಹಾಗೆ ಸೇರಿದ್ದವರಲ್ಲೇ ನಾಲ್ಕಾರು ಗುಂಪುಗಳಾದುವು. ಒಂದೊಂದು ಗುಂಪಿನಲ್ಲೂ ಒಂದೊಂದು ತೆರನಾದ ಮಾತುಕಥೆಗಳಾರಂಭಿಸಿದುವು.

ನಾನು ತರುಣರ ಗುಂಪಿನಲ್ಲಿ ಸಿಕ್ಕಿಬಿದ್ದೆ. ಅವರೆಲ್ಲರೂ ಯೌವನದ, ಯೌವ್ವನಿಕೆಯಿರ ಮಾತುಗಳನ್ನೇ ಆಡಲಾರಂಭಿಸಿದರು. ಮೂವತ್ತೈದು ವರುಷ ದಾಟಿದ ನನಗೆ ಅದು ರುಚಿಸಲಿಲ್ಲ. ಆ ತೆರನಾದ ಅಭಿಲಾಷೆಯು ತುಂಬುಪ್ರಾಯದಲ್ಲಿ ಅನಂತರ ಐವತ್ತು ವರ್ಷಗಳಾದ ಮೇಲೆ ಬಹಳವಾಗಿ ಉಂಟಾಗುವುದು! ಹಾಗಾಗಿ ನಾನು ಮೆಲ್ಲನೆ ಬೇರೊಂದು ಗುಂಪಿಗೆ ಸರಿದುಕೊಂಡೆ.

ಈ ಗುಂಪಿನವರೆಲ್ಲರೂ ವ್ಯಾಪಾರಸ್ಥರು. ನಡೆವ ಯುದ್ಧ, ನಡೆಯದೆ ಇರುವ ಯುದ್ಧ, ತಾವುಗಳು ಮಾಡಿದ ಚಾತುರ್ಯ, ಸರಕಾರಕ್ಕೆ ಸಂಚುಕಾರ ನಡೆಸಿದ್ದು, ಇತ್ಯಾದಿಗಳೇ ಪ್ರಮುಖ ವಾರ್ತೆಗಳು. ನನಗೆ ವ್ಯಾಪಾರದಲ್ಲಿ ಆಸಕ್ತಿ ಕಡಿಮೆ. ಚತುರತೆ ಶೂನ್ಯ. ಇವರುಗಳ ಮಾತೆಲ್ಲವೂ ರಸಹೀನವಾಗಿದ್ದು ನನಗೆ ರುಚಿಸಲಿಲ್ಲ. ಬೇರೊಂದು ಗುಂಪಿಗೆ ಮೆಲ್ಲನೆ ಜಾರಿಕೊಂಡೆ.

ಈ ಗುಂಪಿನಲ್ಲಿ ಜೀವನವನ್ನು ತಕ್ಕಮಟ್ಟಿಗೆ ಸಂಪಾದಿಸಿಕೊಂಡು, ಸಾಹಿತ್ಯವನ್ನು ಶೋಕಿಗಾಗಿಯೂ ಸೌಕರ್ಯಕ್ಕಾಗಿಯೂ ಇಟ್ಟುಕೊಂಡವರೇ ಹೆಚ್ಚಾಗಿದ್ದರು. ಇವರಲ್ಲಿ ಒಬ್ಬೊಬ್ಬರೂ ಒಂದಲ್ಲ ಒಂದುಕಾಲದಲ್ಲಿ ಒಂದು ಸಣ್ಣ ಕತೆಯನ್ನು ಬರೆದಿದ್ದವರು, ಯಾವಾಗಲೋ ಒಂದು ಪದ್ಯವನ್ನು ಬರೆದು ಗಾಳಿಯಲ್ಲಿ ತೂರಿದ್ದವರು, ಯಾವುದಾದರೂ ಒಂದು ಪುಸ್ತಕದ ವಿಮರ್ಶೆಯನ್ನು ಒಮ್ಮೆ ಪತ್ರಿಕೆಗಳಲ್ಲಿ ಬರೆದಿದ್ದವರು, ಒಬ್ಬೊಬ್ಬರ ಮನಸ್ಸಿನಲ್ಲಿಯೂ ತಾವು ಕರ್ನಾಟಕಾಂಬೆಯ ಮೋಹದ ಪುತ್ರರೆಂಬ ಹೆಮ್ಮೆಯು ಮೂಡಿದ್ದುದು. ಇವರ ಸಂಭಾಷಣೆ ಎಂದರೆ ಒಬ್ಬರ ಕೃತಿಗಳನ್ನು ಇನ್ನೊಬ್ಬರು ಹೊಗಳುವುದು. ಅಂತಹ ಕೃತಿಗಳು ರನ್ನನಿಂದೀಚೆಗೆ ಬಂದಿಲ್ಲವೆಂದು ಸಿದ್ಧಾಂತ ಮಾಡುವುದು. ಮುಂದೆ ಬರಲು ಸಾಧ್ಯವಿಲ್ಲವೆಂದು

ನಿರ್ಣಯಿಸುವುದು. ಈ ತೆರನಾದ ಪರಸ್ಪರ ಮೆಚ್ಚುಗೆಗಾದರ ಮಾತು ಕಥೆಗಳು ನನಗೆ ಹೆಚ್ಚು ಹೊತ್ತು ರುಚಿಸಲಿಲ್ಲ. ಹಾಗೆಯೇ ಮುಂದಿನ ಗುಂಪಿಗೆ ಸೇರಿಕೊಂಡೆ.

ಈ ಗುಂಪು ಲಂಬಾಣಿಗಳ ಗುಂಪಿನಂತೆ. ಚಿಂದಿಚಿಂದಿ ಬಟ್ಟೆಯ ಕಿರಿಯ ಸಾಹಿತಿಗಳು— ಲಂಬಾಣಿಗಳಂತೆ ಉಡುಪು ಧರಿಸಿದ ತರುಣ ಸಾಹಿತಿಗಳು— ಮತ್ತು ಹಿರಿಯ ಸಾಹಿತಿಗಳು. ಕಿರಿಯ ಸಾಹಿತಿಗಳಿಗೆ ಹಿರಿಯರಲ್ಲಿ ಸಾಕಷ್ಟು ಚೈತನ್ಯವಿಲ್ಲವೆಂಬ ಅನುಮಾನ. ಬೇಕಾದಷ್ಟು ಸೇವೆಯಿಲ್ಲವೆಂಬ ಶಂಕೆ. ಹಿರಿಯರಿಗೆ ಕಿರಿಯರಲ್ಲಿ ಸಾಕಷ್ಟು ಸಹನೆ ಇಲ್ಲವೆಂಬ ಕೊರತೆ. ಕೋರಿದಷ್ಟು ಸಹಾಯ ಇಲ್ಲವೆಂಬ ದುಃಖ. ಹೀಗಾಗಿ ಈ ಗುಂಪು ಮಿಶ್ರಭಾವನೆಗಳ ಮಿಶ್ರಿತ ಮಂಡಳವಾಗಿದ್ದಿತು. ಇಲ್ಲಿನ ಮಾತುಕತೆಗಳೂ ವಾಕ್ಯುದ್ಧಗಳೂ ಬಲು ಹಿತವಾಗಿರಬಹುದೆಂದು ಯೋಚಿಸಿ ಅಲ್ಲಿಯೇ ಚಿಕಿಯಿಂದ ಕುಳಿತೆ.


ಹಿರಿಯ ಸಾಹಿತಿಗಳಲ್ಲಿ ಅಗ್ರಗಣ್ಯರಾದವರು ಅಡಿಕೆಯ ಚೂರನ್ನು ಹಲ್ಲಿನ ಸಂದಿಯಿಂದ ಹೊರದೂಡುತ್ತಾ ತೊದಲಿದರು. "ಈಗಿನ ಕಾಲದ ಹುಡುಗರಿಗೆ ವ್ಯಕ್ತಿತ್ವವೇ ಇಲ್ಲ. ಏನೋ ಒಂದು ತೆರನಾಗಿ ಯೋಚನೆಗಳು ಮೂಡುವವು. ತಕ್ಷಣ ಪುಟ್ಟಗೆ ಅಂಟವಾದ ಪುಸ್ತಕಗಳನ್ನು ಬರೆಯುವರು. ಅವರಿಗೆ ವ್ಯಕ್ತಿತ್ವವಿಲ್ಲದ ಕಾರಣ ಅದು ಮಾರಾಟವಾಗುವುದಿಲ್ಲ. ಸಾರ್ವಜನಿಕರ ಆಸರೆ ದೊರೆಯುವುದಿಲ್ಲ" ಎಂದರು. ಪುಸ್ತಕವನ್ನು ಪ್ರಕಟಿಸಿ ಮೂರು ವರ್ಷಗಳಾದರೂ ಮುನ್ನೂರು ಪ್ರತಿಗಳನ್ನು ಮಾರಲಾರದೇ ಇದ್ದ ತರುಣ ಲೇಖಕನೊಬ್ಬನು "ವ್ಯಕ್ತಿತ್ವವೆಂದರೇನು? ನನಗೇನು ವ್ಯಕ್ತಿತ್ವ ಕಡಿಮೆಯಾಗಿದೆಯೇ? ಎಲ್ಲರಂತೆ ಪುಷ್ಟಕಾಯವಿಲ್ಲದಿದ್ದರೂ ಮುಖವೇನು ಕಾಂತಿ ಹೀನವಾಗಿಲ್ಲ ಆದರೂ ನನ್ನ ಪುಸ್ತಕ—ನೀವು ಮುನ್ನುಡಿ ಬರೆದ ಪುಸ್ತಕ—ಮಾರಾಟವಾಗಲಿಲ್ಲ" ಎಂದು ಉದ್ಗಾರ ತೆಗೆದನು. ಕುಚೋದ್ಯದ ಕೊರವನು ಉತ್ತರವೀಯುತ್ತ "ಹಾಗಲ್ಲರೀ" ವ್ಯಕ್ತಿತ್ವ ಎಂದರೆ ಪಠ್ಯಪುಸ್ತಕ ಸಮಿತಿಯವರಲ್ಲಿ ಗಣ್ಯನಾಗಿರಬೇಕು. ಸಮಿತಿಯ ಸದಸ್ಯರಿಗೆ ಬೇಕಾದವನಾಗಿರಬೇಕು. ಉದಾಹರಣೆಗೆ ನಮ್ಮ ವಸಂತು ನೋಡ್ರಿ. ರಷ್ಯಾ ಪುಸ್ತಕದ ಇಂಗ್ಲೀಷ್ ತರ್ಜುಮೆಯನ್ನು ಕನ್ನಡಿಸಿ ಆ ಪುಸ್ತಕಗಳನ್ನೇ ಮಾರಲಿಲ್ಲವೇ, ನೀವನ್ನಬಹುದು ಆತನ ಮಾವ ಸಮಿತಿಯ ಅಧ್ಯಕ್ಷ ಎಂದು. ಆ ಕಾರಣದಿಂದಲ್ಲ ಪುಸ್ತಕ ವ್ಯಾಪಾರವಾದುದು. ವಸಂತುವಿನ ವ್ಯಕ್ತಿತ್ವದಿಂದ" ಎಂದು ಹೇಳಿಯೇ ಬಿಟ್ಟನು. ಸಮಿತಿಯ ಅಧ್ಯಕ್ಷರಾದರೂ ಅಲ್ಲಿಯೇ ಇದ್ದರು. ಈ ತೆರನಾದ ಮುಸುಕಿನೊಳಗಿನ ಗುದ್ದಿಗೆ ಪ್ರತೀಕಾರ ಮಾಡುವುದು ಸುಲಭವಲ್ಲ. ಸರಿಯಾದ ಉತ್ತರ ಹೇಳುವುದು ಸಾಧ್ಯವಲ್ಲ. ಆದುದರಿಂದ ಹಿರಿಯರ ರೂಢಿಯಂತೇ ಒಂದೇ ಮಾತಿನಲ್ಲಿ ಸವಾಲು ಮುಗಿಸಿದರು "ಈಗಿನ ಹುಡುಗರಿಗೆ ವ್ಯಕ್ತಿತ್ವ ಬರುವ ಮೊದಲು ಅದನ್ನು ರೂಪುಗೊಳಿಸುವ ಮುನ್ನ, ಮಾನಮರ್ಯಾದೆಗಳನ್ನು ಕಲಿಯಬೇಕು. ಹಿರಿಯರಲ್ಲಿ ಗೌರವವಿಡುವುದನ್ನು ಅಭ್ಯಾಸ ಮಾಡಬೇಕು." ಎಂದು ಹೇಳಿಯೇ

ಬಿಟ್ಟರು. ಕೊರವನಿಗೆ ನಾನೇಕೆ ನಡೆದುದನ್ನು ಹಾಗೆಯೇ ಹೇಳಿದೆನಪ್ಪಾ ಎನ್ನಿಸಿತು. ಹಿರಿಯವರಿಗೆ ತಮ್ಮ ಕಡೆಗೇ ಕೊನೆಯ ಮಾತು ಉಳಿಯುತಲ್ಲಾ ಎಂಬ ಹಿಗ್ಗು. ಕಿರಿಯರಲ್ಲಿ ಇನ್ನಾರೂ ಏನನ್ನೂ ಹೇಳಲೇ ಇಲ್ಲ. ಆ ಗುಂಪಿನಲ್ಲಿ ಹಲ್ಲು ಮಾರಿದವರು, ಹದ್ದು ಮಾರುವವರೂ ಬಲುಜನ. ಆದರೂ ಸುಮ್ಮನಿದ್ದುದು ಆಶ್ಚರ್ಯಕರವಾಗಿತ್ತು. ಆದರಲ್ಲೂ ಮಾತಿಗೆ ಮರುಮಾತಿಲ್ಲದೇ ಕುಳಿತ ವಾಸುವನ್ನು ನೋಡಿ ನನಗೆ ಬಹಳ ಸಂದೇಹವಾಯಿತು. ಯಾರಾದರೂ ನಾಯಿಗೆ ಒಂದು ಬಾಲ ಎಂದರೆ, ಪ್ರಾಣಿವರ್ಗದ ಪುಸ್ತಕಗಳನ್ನು ತಂದು, ಕೆಲವಕ್ಕೆ ಎರಡು ಬಾಲವಿದ್ದೇ ಇರುತ್ತೆ ಎಂದು ಸಾಧಿಸುವ ವಾಸುವು ಸುಮ್ಮನೆ ಇದ್ದುದು ಪಠಾಣನು ಪಶ್ಚಾತ್ತಾಪ ಪಟ್ಟಂತೆ ಇದ್ದಿತು. ವಾತಾವರಣವು ಉತ್ಕಟವಾಗ ಹತ್ತಿದುದರಿಂದ ಒಬ್ಬೊಬ್ಬರೂ ಮೆಲ್ಲಗೆ ಹೊರಹೊಂಟರು.

* *

ಇದಾದ ಹದಿನೈದು ದಿನಗಳಾದುವು. ಒಂದು ದಿನ ಸಮಿತಿಯ ಅಧ್ಯಕ್ಷರು ನನಗೆ ಹಾದಿಯಲ್ಲಿ ಸಿಕ್ಕರು. "ನೋಡಯ್ಯಾ ರಾಶಿ ಇವತ್ತು ಬೆಳಿಗ್ಗೆ ಒಂದು ಮೂಕ ಪತ್ರವು ನನಗೆ ಬಂದಿತು ಅದರಲ್ಲಿ ವಾಸುವು ಒಂದು ಪುಸ್ತಕ ಬರೆದಿದ್ದಾನೆಂದೂ, ಪುಸ್ತಕದಲ್ಲಿ ನನ್ನನ್ನು ಬಹುವಾಗಿ ಹಾಸ್ಯಮಾಡಿದ್ದಾನೆಂದೂ, ನಾನು ಕೂಡಲೇ ಪ್ರತೀಕಾರಮಾಡಬೇಕೆಂದೂ ಬರೆದಿದ್ದಿತು. ನಾನು ಕೂಡಲೇ ಅಂಗಡಿಗೆ ಹೋಗಿ ಒಂದು ಪ್ರತಿಯನ್ನು ಎರಡು ರೂಪಾಯಿ ಕೊಟ್ಟು ಕೊಂಡುಕೊಂಡೆ. ಆಮೂಲಾಗ್ರವಾಗಿ ಓದಿದೆ. ನನ್ನನ್ನು ಹೀಯಾಳಿಸಿದಂತೆ ನನಗೇನೂ ತೋರಲಿಲ್ಲ" ಎಂದರು ನನಗೆ ಏನೂ ಅರ್ಥವಾಗಲಿಲ್ಲ. ತಲೆಕೆರದು ಕೊಳ್ಳುತ್ತಾ. ವಾಸುವನ್ನು ನೋಡಿ ನಂತರ ನಿಮಗೆ ಹೇಳುತ್ತೇನೆ ಎಂದು ಹೇಳಿ ನೇರನೆ ವಾಸುವಿನ ಮನೆಗೆ ಹೋದೆ. ವಾಸುವು ಮನೆಯಲ್ಲೇ ಇದ್ದ "ಏನೋ ವಾಸು. ಅಧ್ಯಕ್ಷರು ಹೀಗೆ ಹೇಳಿದರಲ್ಲಾ" ಎಂದು ಕೇಳಿದೆ. ವಾಸುವು ಕೇಳಿದ, "ಅಧ್ಯಕ್ಷರು ಪುಸ್ತಕವನ್ನು ಕೊಂಡುಕೊಂಡರೊ?" ಎಂದು. "ಹೌದು ಹೌದು" ಎಂದು ನಾನು ಹೇಳಿದೆ "ನೋಡು ಅದೇ ರೀತಿಯಾಗಿ ಹಿರಿಯ ಸಾಹಿತಿಗಳಿಗೆಲ್ಲಾ ಒಂದೊಂದು ಕಾಗದವನ್ನು ಬರೆದುಹಾಕಿದ್ದೇನೆ. ಎರಡು ಸಾವಿರ ಸಾಹಿತಿಗಳು ಈ ಕಾಗದವನ್ನು ಓದುತ್ತಾರೆ. ಅವರೆಲ್ಲರೂ ಈ ಪುಸ್ತಕವನ್ನು ಕೊಂಡುಕೊಂಡರೆ ನನಗೆ ಮೂರು ಸಾವಿರ ರೂಪಾಯಿಗಂಟು." ಎಂದು ವಾಸುವು ವಿಶದೀಕರಿಸಿದ.

ಆ ಸಾಯಂಕಾಲ ಅಧ್ಯಕ್ಷರನ್ನು ಹೋಗಿ ನೋಡಿದೆ. "ಏನಾದರೂ ಪತ್ತೆಯಾಯಿತೆ?" ಎಂದರು. "ಏನೂ ಇಲ್ಲ ಸ್ವಾಮಿ" ಅದು ವಾಸುವಿನ ವ್ಯಕ್ತಿತ್ವ ಎಂದು ಹೇಳಿದೆ.



ಒಸ್ದಾಗಿ ಅಕ್ಷರ ಕಲ್ತೋನು ಅಂತ ಇವನನ್ನ ಕೇಳಿದರೆ, ಇಪ್ಪತ್ತೆರಡು ಗಂಟೆಗೆ ಬೆಂಗಳೂರು ರೈಲು ಬರ್ತಾನೆ, ಸೆದ್ದ! ಅನ್ನೆರದರ ನೋಡಿ ಗಂಟೇನ ಬದಿಯೊಂಕಿಲ್ಲವಲ್ಲ ಸ್ವಾಮಿ!